ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 107 Sunday 29-12-2024 E-mail : maruti.b.hosamani76@gmail.com Page: 4 Price : Rs. 1/-

ಅದ್ದೂರಿಯಾಗಿ ಜರುಗಿದ ಕೋಡಿಹಳ್ಳಿಯ ಶ್ರೀ ಶರಣ ಬಸವೇಶ್ವರ ಸ್ವಾಮಿ ಹಾಗೂ ಚೌಡೇಶ್ವರಿ–ದೇವಿಯ ರಥೋತ್ಸವ

ಚಳ್ಳಕೆರೆ : ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ತಳಕು ಹೋಬಳಿಯ ಕೋಡಿಹಳ್ಳಿ ಗ್ರಾಮದಲ್ಲಿಇಂದುಗ್ರಾಮಿಣಜಾನಪದಶೈಲಿಯ ತಮಟೆ ನಗಾರಿ ಉರುಮೆ ನಂದಿ ಕೋಲು, ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಶ್ರೀ ಬಸವೇಶ್ವರ ಸ್ವಾಮಿ ಹಾಗೂ ಚೌಡೇಶ್ವರಿ ದೇವಿಯ ಕಾರ್ತಿಕೋತ್ಸವದ ರಥೋತ್ಸವವು ಇಂದು ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ನಂತರ ಬೆಳಿಗ್ಗೆ 08 ಗಂಟೆಗೆ ರಥೋತ್ಸವಕ್ಕೆ ಬಣ್ಣ ಬಣ್ಣದಬಾವುಟಗಳಿಂದ,ಹೂವಿನಹಾರಗಳಿಂದ, ರಥವನ್ನು ಶೃಂಗಾರ ಮಾಡಲಾಯಿತು.

ಆನಂತರಸುಮಾರು10ಗಂಟೆಗೆಶ್ರೀಬಸವೇಶ್ವರ ಸ್ವಾಮಿ ಉತ್ಸವ ಮೂರ್ತಿಯನ್ನು ಸಕಲ ಪೂಜಾ ವಿಧಿ ವಿಧಾನ ಗಳಿಂದ ಪ್ರತಿಷ್ಠಾಪಿಸಲಾಯಿತು.

ಇನ್ನೂ ಗ್ರಾಮದ ಭಾರೀ ವಂಶಸ್ಥರಾದ ಶ್ರೀಮತಿ ವೀರಮ್ಮ ವಜ್ರಪ್ಪ ಮತ್ತು ಮಕ್ಕಳ ಕುಟುಂಬದ ವತಿಯಿಂದ ಬಲಿ ಅನ್ನ, ಕಾಸು ಮೀಸಲು ತುಂಬಾ ಮೊಸರು, ಜಿನಿಗಿ ಹಾಲು ತಂದು ಶ್ರೀ ಬಸವೇಶ್ವರ ಸ್ವಾಮಿ ತೇರಿನ ಚಕ್ರಗಳಿಗೆ ಎಡೆ ಹಾಕಲಾಯಿತು. ನಂತರ ಮಹಾ ಮಂಗಳಾರತಿ ನೆರವೇರಿಸಿ ಗ್ರಾಮಸ್ಥರು ಹಾಗೂ ಮುಖಂಡರು ರಥೋತ್ಸವಕ್ಕೆ ಚಾಲನೆ ನೀಡಿದರು. ಭವ್ಯವಾದ ಮೆರವಣಿಗೆಯು ವಿವಿಧ ರೀತಿಯ ನೃತ್ಯಗಳು ಡೊಳ್ಳು ಕುಣಿತ, ಕೀಲು ಕುದುರೆ, ಹೂವು ದವನ ಹಣ್ಣುಕಾಯಿಸ್ವಾಮಿಗೆಮತ್ತುರಥೋತ್ಸವಕ್ಕೆಭಕ್ತರು ಸಮರ್ಪಿಸಿದರು, ಮಂಗಳ ವಾದ್ಯಗಳೊಂದಿಗೆ ಗ್ರಾಮದಕೆರೆಕಟ್ಟೆಯಸಮೀಪಇರುವಪಾದಗಟ್ಟೆ ಬಳಿ ಸೇರಿತು.

ಈ ಬಾರಿಯ ಮುಕ್ತಿ ಬಾವುಟವನ್ನು ಸೂರಯ್ಯನವರಪುತ್ರರಾದತಿಪ್ಪೇಸ್ವಾಮಿರವರು ಹರಾಜಿನಲ್ಲಿ ತಮ್ಮದಾಗಿ ಸಿಕೊಂಡು ಸ್ವಾಮಿಯ ಕೃಪೆಗೆ ಪಾತ್ರರಾದರು.



ನಂತರ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಮುಖಂಡರಾದ ದೊಡ್ಡ ಓಬಯ್ಯ ಮಾತನಾಡಿ 50 ವರ್ಷಗಳ ನಂತರ ನಮ್ಮಗ್ರಾಮದಕೆರೆತುಂಬಿಕೋಡಿಬಿದ್ದಿರುವುದು ಅತ್ಯಂತ ಸಂತಸದ ವಿಷಯ ಒಂದೆಡೆ ಯಾದ–ರೆ, ಮೂರು ದಿನಗಳ ಹಿಂದೆ ನಮ್ಮ ಗ್ರಾಮದ ಹಿರಿಯ ಮುಖಂಡರು ಹಾಗೂ ಡಿ.ಸಿ.ಸಿ ಬ್ಯಾಂಕ್ ನ ಜಿಲ್ಲಾ ಉಪಾಧ್ಯಕ್ಷರು ಆದ ಶ್ರೀಯುತ ಎಸ್.ಪಾಲಯ್ಯ ರವರನ್ನು ಕಳೆದುಕೊಂಡು ಗ್ರಾಮಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ನಂತರಗ್ರಾಮದಮುಖಂಡರಾದಜಿ.ತಿಪ್ಪೇಸ್ವಾಮಿ ಮಾತನಾಡಿ ಪ್ರತಿ ವರ್ಷದಂತೆ ಈ ವರ್ಷವೂ ಎಲ್ಲ ಸಮುದಾಯದವರು ಪಾಲ್ಗೊಂಡು ರಥೋತ್ಸವವನ್ನು ಯಶಸ್ವಿ ಗೊಳಿಸಿದರು ಎಲ್ಲರಿಗೂಶರಣಬಸವೇಶ್ವರಸ್ವಾಮಿಹಾಗೂಶ್ರೀ ಚೌಡೇಶ್ವರಿ ದೇವಿಯು ಗ್ರಾಮದ ಎಲ್ಲ ಸದ್ಭಕ್ತರಿಗೆ ಒಳ್ಳೆಯ ಆಯುಷ್ ಆರೋಗ್ಯ ನೀಡಿ ಕಾಪಾಡಲಿ ಹಾಗೆ ಒಳ್ಳೆಯ ಮಳೆ ಬೆಳೆ ಸಮೃದ್ಧಿಯಾಗಲಿ ಎಂದು ಶುಭ ಹಾರೈಸಿದರು.

ಈ ದಿನ ಗ್ರಾಮದ ಶ್ರೀ ಚೌಡೇಶ್ವರಿ ಯುವಕ ನಾಟ್ಯ ಕಲಾ ಸಂಘದ ವತಿಯಿಂದ ಇಂದು ರಾತ್ರಿ "ಗರುಡನ ಕೈಗೆ ಸಿಕ್ಕಿ ಬರಡಾದ ಪಾರಿವಾಳ ಅರ್ಥಾತ್ ಪ್ರೇಮ ಲೋಕದಲ್ಲಿ ಪಾರಿಜಾತ" ಎಂಬ ಸುಂದರ ಸಾಮಾಜಿಕ ನಾಟಕ ಪ್ರದರ್ಶನ ನೀಡುತ್ತಿರುವುದು ಅತ್ಯಂತ ವಿಶೇಷವಾಗಿದೆ.

ಈ ಸಂದರ್ಭದಲ್ಲಿ ಶ್ರೀ ವಾಲ್ಮೀಕಿ ಯುವಕ ಸಂಘ ಡಾ, ಬಿ.ಆರ್ ಅಂಬೇಡ್ಕರ್ ಯುವಕ ಸಂಘ, ವಿವಿಧ ಮಹಿಳಾ ಸಂಘಟನೆಗಳ ಎಲ್ಲ ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು, ಯುವಕರು, ಮತ್ತು ಗ್ರಾಮದ ಮುಖಂಡರಾದ ಗ್ರಾಮದ ಬಾಲಯ್ಯ, ಒಬಣ್ಣ, ಬಸಯ್ಯ, ಪಾಲಯ್ಯ, ಗೋಪಣ್ಣ ರೈತರಾದ ನಾಗರಾಜ್, ತಿಪ್ಪೇಸ್ವಾಮಿ, ಸೋಮಶೇಖರ್, ಲಿಂಗಾ–ರೆಡ್ಡಿ, ಭೀಮರೆಡ್ಡಿ, ರುದ್ರಣ್ಣ, ಬಸವ ರೆಡ್ಡಿ, ಓಬಯ್ಯ, ಟಿ. ರಾಜಣ್ಣ, ಪಿ.ಪ್ರಹಲ್ಲದ್, ಗ್ರಾಮ ಪಂಚಾಯಿತಿ ಸದಸ್ಯರು ಆದ ಎಸ್.ಟಿ.ರೇವಣ್ಣ, ಟಿ. ರಾಜಣ್ಣ, ದ್ರಾಕ್ಷಾಯಿಣಿ ನಾಗರಾಜ್, ಡಿ.ಓ ಲಕ್ಷ್ಮಿ , ಶ್ರೀಮತಿ ಲಕ್ಷ್ಮೀದೇವಿ ತಿಪ್ಪೇಸ್ವಾಮಿ, ಸಣ್ಣ ನಾಗಯ್ಯ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಆದ ಎಂ.ಏಚ್ ತಿಪ್ಪೇಸ್ವಾಮಿ, ಪುಟ್ಟಣ್ಣ, ತಿಪ್ಪೇಸ್ವಾಮಿ, ಓಬಣ್ಣ, ಮಂಜಣ್ಣ, ಮಲ್ಲಿಕಾರ್ಜುನಯ್ಯ.ಟಿ, ಲಿಂಗರಾಜ್.ಡಿ, ರುದ್ರಮುನಿ, ಮಂಜುನಾಥ್,ಎಂ.ಟಿ, ವಿನಯ್ ಕುಮಾರ್ಬಿ.ಎಂ,ಶಿವಕುಮಾರ್ಭಾರಿಭಿಮೇಶ್ ಶೆಟ್ಟಿ, ತಿಮ್ಮಶೆಟ್ಟಿ, ಶ್ರೀನಿವಾಸ್, ಮಂಜುನಾಥ್ ಸ್ವಾಮಿ.ಟಿ ಶಾಂತಣ್ಣ, ಗುರುಸ್ವಾಮಿ, ಮಾರಣ್ಣ, ಹನುಮಂತಪ್ಪ, ಗಂಗಣ್ಣ, ದುರುಗಣ್ಣ, ಸಣ್ಣ ತಿಪ್ಪೇಸ್ವಾಮಿ,ಮುಂತಾದವರುಉಪಸ್ಥಿತರಿದ್ದರು.

ವರದಿ : ಕೋಡಿಹಳ್ಳಿ.ಟಿ. ಶಿವಮೂರ್ತಿ.

ಚಿತ್ರದುರ್ಗ

ವೆಂಕಟೇಶ ದೇವಾಲಯಕ್ಕೆ ಶ್ರೀ ಸತ್ಯಾತ್ಮ ತೀರ್ಥ ಗುರುಗಳು–ಸಂದೇಶ ನೀಡಿದರು

ಇಲಕಲ್ಲ : "ಪಶುಗಳಂತೆ ಬಾಳದೇ ಮನುಷ್ಯ ಧರ್ಮವನ್ನು ಅರಿತು ಬಾಳುವುದೇ ಶ್ರೇಷ್ಠ ಧರ್ಮ, ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ತಿಳಿಸಿದಂತೆ ಅಸುರಿ ಗುಣಗಳನ್ನು ತ್ಯಜಿಸಿ ದೈವೀ ಗುಣಗಳನ್ನು ಸ್ವೀಕರಿಸಬೇಕು. ನಮ್ಮ ಉತ್ತಮ ಗುಣಗಳು ನಮ್ಮ ಸಂಪತ್ತುಗಳಾ ಗಬೇಕು. ರಾಷ್ಟ್ರಮಟ್ಟದಲ್ಲಿ ಉತ್ತಮ ಸಮಾಜ ನಿರ್ಮಾಣ ಮಾಡಲು ನಮ್ಮ ಅಂತರಂಗವನ್ನು ಶುದ್ಧಗೊಳಿಸಿಕೊಳ್ಳುವ ಅವಶ್ಯಕತೆ ಇದೆ." ಎಂದು ಉತ್ತರಾದಿ ಮಠಾಧೀಶರಾದ ಶ್ರೀ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಅನುಗ್ರಹ ಸಂದೇಶ ನೀಡಿದರು. ಇಳಕಲ್ ಬ್ರಾಹ್ಮಣ ಸಮಾಜ, ಬಾಗಲಕೋಟೆಯ ವಿಶ್ವಮಾಧ್ವ ಪರಿಷತ್ತು ಸಂಯುಕ್ತವಾಗಿ ಆಯೋಜಿಸಿದ್ದ ಗೀತಾ ಅಭಿಯಾನ ಸಮರ್ಪಣಾ ಸಮಾರಂಭದಲ್ಲಿ ಗುರುಗಳು ಭಕ್ತರನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ಸಂಯೋಜಕರಾದ ಬಂಡು ಕಟ್ಟಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಇಳಕಲ್ ಬ್ರಾಹ್ಮಣ ಸಮಾಜವು ಆಯೋಜಿಸಿದ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ಸಭೆಗೆ ತಿಳಿಸಿದರು. ಡಾ. ಸುಶೀಲ ಸು. ಕಾ–ಖಂಡಕಿ, ಹಾಗೂ ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ಪಾಂಡುರಂಗ ಕುಲಕರ್ಣಿ ಅವರು ಗುರುಗಳಿಗೆ ಪಾದಪೂಜೆ ಸಲ್ಲಿಸಿ ಅಭಿಯಾನ ಸಮರ್ಪಣಾ ಸಮಾರಂಭವನ್ನು ನೆರವೇರಿಸಿದರು.



ಹಿರಿಯ ಅರ್ಚಕರಾದ ನಾರಾಯಣ–ಾಚಾರ್ಯ ಪೂಜಾರ, ಹಾಗೂ ಪ್ರವಚನ ಕಾರ್ಯಕ್ರಮಗಳ ಪ್ರಾಯೋಜ–ಕರಾದ ಡಾ. ಸುಶೀಲ ಕಾಖಂಡಕಿ, ಡಾ. ಅಭಿಜಿತ್ ಗುರುರಾಜ ಕಾಖಂಡಕಿ, ಪ್ರೊ. ರಮೇಶ ಕೆ. ಕುಲಕರ್ಣಿ, ಭಾಸ್ಕರ ಪಾಟೀಲ, ಅಶೋಕ ಗೊಂಬಿ ಅವರನ್ನು ಗುರುಗಳು ಶೇಷವಸ್ತ್ರ ಹಾಕಿ ಗೌರವಿಸಿದರು. ಬಾಗಲಕೋಟೆಯ ವಿಶ್ವಮಾಧ್ವಪರಿಷತ್ನಿಂದ ಪಂ. ರಘೂತ್ತಮಾಚಾರ್ಯ ಹಾಗೂ ಪಂ. ಬಿಂಧುಮಾಧವಾಚಾರ್ಯ ನಾಗಸಂಪಿಗಿ ಸಹೋದರರು ಆಗಮಿಸಿದ್ದರು. ಗುರುಗಳ ಆಗಮನವನ್ನು ನಿರೀಕ್ಷಿಸುತ್ತಾ ಭಕ್ತರು ಸುಮಾರು ಮೂರೂವರೆ ಗಂಟೆಗಳ ಕಾಲ ದೇವಸ್ಥಾನದಲ್ಲಿದ್ದರು. ಹನುಮಸಾಗರ, ಕುಷ್ಟಗಿ ಮುಂತಾದ ಊರುಗಳಿಂದ ಭಕ್ತರು ಆಗಮಿಸಿದ್ದರು. ಉತ್ತರಾದಿಮಠ ಸಂಸ್ಥಾನದ ಪ್ರಸ್ತುತ ದಿವಾನರಾದ ಶಶಿ ಆಚಾರ್ಯರು ಸಂಯೋಜಕರಿಗೆ ಕಾರ್ಯಕ್ರಮದ ಮಾರ್ಗದರ್ಶಕರಾಗಿದ್ದರು. ಸಮಾಜದ ಪದಾಧಿಕಾರಿಗಳಾದ ವಿಜಯ ಕಾರ್ಕಳ, ಕಾಶೀನಾಥ ದೇಶಪಾಂಡೆ, ಗಿರಿಧರ ದೇಸಾಯಿ ಮುಂತಾದವರು ಸಮಾರಂಭದ ಉಸ್ತುವಾರಿಯನ್ನು ನಿರ್ವಹಿಸಿದರು.

ಸಮಕಾಲೀನ ಪೀಠಾಧಿಪತಿಗಳಲ್ಲಿ ವಿಶಿಷ್ಟ ಸ್ಥಾನದಲ್ಲಿರುವ ಶ್ರೀ ಸತ್ಯಾತ್ಮತೀರ್ಥರು ಅಭಿನವ ರಘೂತ್ತಮತೀರ್ಥರೆಂದು ಪ್ರಸಿದ್ಧರಾಗಿದ್ದಾರೆ. ಅವರು ನೀಡುವ ವಿದ್ವತ್ಪೂರ್ಣ ಅನುಗ್ರಹ ಸಂದೇಶಗಳಿಗಾಗಿ ಜನರು ದಾರಿ ಕಾಯುತ್ತಾರೆ. ವರ್ಷಗಳಿಂದ ಗುರುಗಳ ಆಗಮನವನ್ನು ನಿರೀಕ್ಷಿಸುತ್ತಿದ್ದ ಸ್ಥಳೀಯ ಭಕ್ತರ ಹರ್ಷವು ಗುರುಗಳ ಆಗಮನದಿಂದ ಮುಗಿಲು ಮುಟ್ಟಿತ್ತು. ದೇವಾಲಯದಲ್ಲಿ ಜನರು ಕಿಕ್ಕಿರಿದು ಸೇರಿದ್ದರು.

ಉತ್ತರಾದಿಮಠಾಧೀಶ ಶ್ರೀಸತ್ಯಾತ್ಮತೀರ್ಥರ ಅಭಿಮತ | ಶ್ರೀರಾಮದೇವರ ಯಾತ್ರೆಯಲ್ಲಿ ಭಾಗಿ

ಜತೆಗಿದ್ದವರೂ ಧರ್ಮಮಾರ್ಗದಲ್ಲಿ ಸಾಗುವಂತೆ ಪ್ರೇರೇಪಿಸಬೇಕು

ಬಾಗಲಕೋಟೆ : ಧರ್ಮವನ್ನು ನಾವು ಆಚರಿಸುವುದರೊಂದಿಗೆ ನಮ್ಮವರನ್ನೂ ಧರ್ಮದ ಮಾರ್ಗದಲ್ಲಿ ಸಾಗುವಂತೆ ಪ್ರೇರೇಪಿಸುವ ಮಹತ್ವದ ಕಾರ್ಯವನ್ನು ಮಾಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆಂದುಉತ್ತರಾದಿಮಠಾಧೀಶರಾದ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ಹೇಳಿದರು.

ರವಿವಾರ ನವನಗರದ ಕಿಲ್ಲಾ ವೆಂಕಟೇಶ ದೇವಸ್ಥಾನದಿಂದ ಜರುಗಿದ ಶ್ರೀರಾಮದೇವರ ಯಾತ್ರೆಯಲ್ಲಿ ಪಾಲ್ಗೊಂಡ ನಂತರ ಉತ್ತರಾದಿಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು. ಧರ್ಮವನ್ನು ನಾವು ಪಾಲಿಸುವದರೊಂದಿಗೆ ನಮ್ಮಿಂದ ಜ್ಞಾನ ಪಡೆಯುವವರು, ಬಂಧುಗಳು, ಇಷ್ಟದ ಮಿತ್ರರಿಗೂ ತಿಳಿಸಿ ಅವರೂ ಅನುಸರಿಸುವಂತೆ ಮಾಡಬೇಕು. ಭಗವಂತ ಸೇವೆ ಹೇಗೆ ಮಾಡಬೇಕೆಂಬುದಕ್ಕೆ ವಾಯುದೇವರು ಪ್ರೇರಣೆಯಾಗಿದ್ದಾರೆ. ಅಂಥ ಪ್ರೇರಣೆಯೊಂದಿಗೆ ಸತ್ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ನಮ್ಮ ಹಿರಿಯರು ಅನುಸ–ರಿಸಿಕೊಂಡು ಬಂದ ಆಚರಣೆಗಳನ್ನು ಜ್ಞಾನಪೂರ್ವಕವಾಗಿ ಅರ್ಥೈಸಿಕೊಳ್ಳುವ ಕೆಲಸ ಮಾಡಬೇಕು. ಸಂಧ್ಯಾವಂದನೆ, ಪೂಜಾದಿ ಕಾರ್ಯಗಳನ್ನು ಮಾಡುವಾಗ ಅವುಗಳ ಮಹತ್ವ ಅರಿಯಬೇಕು. ಶ್ರೀಮದ್

ಆನಂದತೀರ್ಥ ಭಗವತ್ಪಾದಾಚಾರರು ದಿವ್ಯ,ಭವ್ಯವಾದ ಸಿದ್ಧಾಂತಗಳ ಸಾಗರವನ್ನು ವಿವರಿಸಿದ್ದಾರೆ ಅದರಲ್ಲಿ ಮಣಿಗಳು, ಪ್ರಮೇಯಗಳಿವೆ. ಶ್ರೀರಾಘವೇಂದ್ರ ಸ್ವಾಮಿಗಳು ಪ್ರಾಂತಸಂಕಲ್ಪ ಗದ್ಯದಲ್ಲಿ ಅನೇಕ ಪ್ರಮೇಯಗಳನ್ನು ಸಂಗ್ರಹಿಸಿ ತಿಳಿಸುವ ಕೆಲಸವನ್ನು ಮಾಡಿದ್ದಾರೆ. ಮಧ್ವಾಚಾರ್ಯರು ಪ್ರಣವಗಳ ಮಹಿಮೆ ಸಾರಿದ್ದಾರೆ. ನಮ್ಮ ಆಚರಣೆ, ಧರ್ಮವನ್ನು ಜ್ಞಾನಪೂರ್ವಕವಾಗಿ ಅರ್ಥೈಸಿಕೊಳ್ಳುವ ಕೆಲಸವಾಗಬೇಕೆಂದರು.

ಉತ್ತರಾದಿಮಠದ ಪರಂಪರೆಯಲ್ಲಿ ಬಂದ ಶ್ರೀಸತ್ಯಾಭಿನವತೀಥ–ರು ಶ್ರೀಮಠಕ್ಕೆ ಭೇಟಿ ನೀಡಿ ದರ್ಶನ ಪಡೆಯುವುದರಿಂದ ತೀರ್ಥಯಾತ್ರೆ ಮಾಡಿದಷ್ಟು ಫಲ ಸಿಗುತ್ತದೆ ಎಂಬುದನ್ನು ತಿಳಿಸಿಕೊಟ್ಟಿದ್ದರು. ಪ್ರಸನ್ನ ವೆಂಕಟದಾಸರ ಜೀವತಾವಧಿಯಲ್ಲಿದ್ದ ಸತ್ಯಾಭಿನವರ ಬಗ್ಗೆ ದಾಸರು ವಿಶೇಷ ಪ್ರೀತಿಯನ್ನು ತೋ–ರಿದ್ದರು. ಬಾಗಲಕೋಟೆಯಲ್ಲಿ ಸಮಾಜದ ಯುವಕರೇ ಮುತ್ತುವರ್ಜ ವಹಿಸಿ ಕಾರ್ಯಕ್ರಮಗಳನ್ನು ಮಾಡುತ್ತಿರುವುದು ಸಂತಸ ತಂದಿದೆ ಎಂದರು.

ಪಂ. ರಘೋತ್ತಮಾಚಾರ್ಯ ನಾಗಸಂಪಿಗೆ, ಪಂ.ಭೀಮಸೇನಾಚಾರ್ಯ ಪಾಂಡುರಂಗಿ ಅವರು ಮಾತನಾಡಿ, ಶ್ರೀಗಳು ಐದು ದಿನಗಳ ಕಾಲ ಬಾಗಲಕೋಟೆಯಲ್ಲಿ ಕಾರ್ಯಕ್ರಮ ಕೈಗೊಂಡಿದ್ದು, ಭಕ್ತರ ಮನಸ್ಸು ತುಂಬಿ ಬಂದಿದೆ. ಈ ಕಾರ್ಯಕ್ರಮದಿಂದಾಗಿ ಧರ್ಮಕಾರ್ಯವನ್ನು ಕೈಗೊಳ್ಳಲು ಮತ್ತಷ್ಟು ಪ್ರೇರೇಪಣೆ ಸಿಕ್ಕಂತಾಗಲಿದೆ ಎಂದರು. ಪಂ. ಬಿಂದುಮಾಧವಾಚಾರ್ಯ ನಾಗಸಂಪಿಗೆ ಮತ್ತಿತರರು ಇದ್ದರು.

ಗಮನಸೆಳೆದ ರಾಮದೇವರಾಯಾತ್ರೆ: ರವಿವಾರ ಸಂಜೆ ನವನಗರದ ಕಿಲ್ಲಾ ವೆಂಕಟೇಶ ದೇವಸ್ಥಾನದಿಂದ ಶ್ರೀಉತ್ತರಾದಿಮಠದವರೆಗೆ ಭವ್ಯ ಶ್ರೀರಾಮದೇವರಯಾತ್ರೆ ಜರುಗಿತು. ಎತ್ತಿನ ಬಂಡಿಯಲ್ಲಿ ಶ್ರೀಮಧ್ವಾಚಾರ್ಯರ ಭಾವಚಿತ್ರ ಸಹಿತ ಶ್ರೀಮನ್ನ್ಯಾಯಸುಧಾ ಗ್ರಂಥ, ಹಿಂದೆ ಕುದರೆಗಳ ಮೇಲೆ ಶ್ರೀ–ಜಯತೀರ್ಥರ ಬೃಂದವಾನ ಹಾಗೂ ಶ್ರೀರಘುವರ್ಯತೀರ್ಥರ ಬೃಂದಾವನದ ಭಾವಚಿತ್ರವನ್ನು ಹೊತ್ತು ಮೆರವಣಿಗೆ ಮಾಡಲಾಯಿತು. ಮೆರವಣಿಗೆಗೆ ಸೇ–ರಿದ್ದ ಅಸಂಖ್ಯಾತ ಭಕ್ತರೊಂದಿಗೆ ಶ್ರೀಸತ್ಯಾತ್ಮತೀರ್ಥರು ಹೆಜ್ಜೆಹಾಕಿದರು. ಭಜನೆ, ದೇವರನಾಮಸ್ಮರಣೆ, ಜಯಘೋಷಗಳು ಮೆರವಣಿಗೆಯುದ್ಧಕ್ಕೂ ಮೊಳಗಿದವು.

ಅಪರಾಧಿಗಳನ್ನು ಬಿಟ್ಟು ಅಮಾಯಕರನ್ನು ಬಂದಿಖಾನೆಗೆ ಕಳುಹಿಸಿದ ಪೊಲೀಸರು

ಲಿಂಗಸಗೂರು : ಠಾಣಾ ವ್ಯಾಪ್ತಿಯ ಬಸ್ ನಿಲ್ದಾಣದ ಹತ್ತಿರ ದಿನಾಂಕ. 19 ರ ರಾತ್ರಿ 11:30 ರ ಸಮಯದಲ್ಲಿ ಕ್ಷುಲ್ಲಕ ಕಾರಣಕ್ಕೆ ಎರಡು ಗುಂಪುಗಳ ನಡುವೆ ಮಾರಾಮರಿ ನಡೆದಿದ್ದು ಅ ವಿಚಾರವಾಗಿ ಲಿಂಗಸಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಆದರೆ ಎರಡು ಗುಂಪು ಘರ್ಷಣೆ ಮಾಡಿದ ಇಲಿಯಾಸ್ ತಂದೆ ಸೋಫಿಸಾಬ ಕುರೆಷಿ, ಉಮೇರ್ ತಂದೆ ಮುಸ್ತಫಾ ಕುರೆಷಿ, ಪ್ರಮುಖ ವ್ಯಕ್ತಿಗಳನ್ನು ಬಿಟ್ಟು ಅವರನ್ನು ಬಿಡಿಸಲು ಬಂದ ವ್ಯಕ್ತಿಗಳಾದ ದಾದಾ ಪಟೇಲ್ ತಂದೆ ಶಕೀಲ್ ಅಹಮದ್ ಹಾಗೂ ಫೈರೋಜ್ ತಂದೆ ಚಂದವಲಿ ಇವರನ್ನು ಪೊಲೀಸರು ಬಂಧಿಸಿ ಈ ಅಮಾಯಕರ ಮೇಲೆ ಪ್ರಕರಣ ವನ್ನು ದಾಖಲಿಸಿ ಬಂದಿಖಾನೆಗೆ ಕಳುಹಿಸಿದ್ದು ಆದರೆ ಈ ಪ್ರಕರಣದ ಪ್ರಮುಖ ಆರೋಪಿಗಳನ್ನು ಪೊಲೀಸರು ಬಂದಿಸದೆ ಇರುವುದು ಅನುಮಾನಕ್ಕೆ ಎಡೆ ಮಾಡಿ

ಕೊಟ್ಟಂತಾಗಿದೆ.

ಕಾನೂನಿನಲ್ಲಿ ಒಬ್ಬ ಅಪರಾಧಿಗೆ ಶಿಕ್ಷೆ ಆಗದಿದ್ದರೂ ಒಬ್ಬ ನಿರಪರಾಧಿಗೆ ಶಿಕ್ಷೆ ಯಾಗಬಾರದೆಂದು ಹೇಳುತ್ತದೆ ಅದರಂತೆ ಈ ಪ್ರಕರಣದಲ್ಲಿ ಪ್ರಮುಖ ಇಬ್ಬರು ಅಪರಾಧಿಯನ್ನು ಬಂಧಿಸಿ ಜಗಳ ಬಿಡಿಸಲು ಬಂದವರನ್ನು ಪ್ರಕರಣದಿಂದ ವಿಮುಕ್ತಿ ಗೊಳಿಸಬೇಕೆಂದು ಪತ್ರಿಕೆ ಯೊಂದಕ್ಕೆ ನೊಂದ ಮನೆಯವರಾದ ಶೈಫು ತಂದೆ ಶಕೀಲ್ ಮತ್ತು ಸಾಬೀರ್ ತಂದೆ ಚಂದವಲಿ ಇವರುಗಳು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಪೋಷನ್ ಅಭಿಯಾನ: ಯೋಜನಾ ಸಹಾಯಕ ಹುದ್ದೆಗೆ ಭರ್ತಿ

ಬಾಗಲಕೋಟೆ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪೋಷನ್ ಅಭಿಯಾನ ಯೋಜನೆಯಡಿ ನೇರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಯೋಜನಾ ಸಹಾಯಕರ ಹುದ್ದೆ ಭರ್ತಿಗಾಗಿ 11 ತಿಂಗಳ ಅವಧಿಗೆ ಅಥವಾ ಯೋಜನೆ ಜಾರಿಯಲ್ಲಿರುವವರೆಗೆ ಹಾಗೂ ಷರತ್ತುಗಳಿಗೆ ಒಳಪಟ್ಟು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ಯೋಜನಾ ಸಹಾಯಕರ ಹುದ್ದೆಗೆ ಮಾಸಿಕ ಗೌರವಧನ 18 ಸಾವಿರ ರೂ.ಗಳನ್ನು ನೀಡಲಾಗುತ್ತಿದ್ದು, ಹುದ್ದೆಗೆ ಅರ್ಜಿ ಸಲ್ಲಿಸುವವರು ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಅಥ–ವಾ ಪಿಜಿ ಡಿಪ್ಲೋಮಾ ಇನ್ ಮ್ಯಾನೇಜಮೆಂಟ್, ಸೋಷಿಯಲ್ ಸಾಯಿನ್ಸ್ ಅಥವಾ ನ್ಯೂಟ್ರಿಶನ್ ವಿದ್ಯಾರ್ಥಿಗಳು ಹೊಂದಿದ್ದು, ಕನಿಷ್ಟ 2 ವರ್ಷದ ಕೆಲಸ ಅನುಭವ ಹೊಂದಿರಬೇಕು.

ಇಂಗ್ಲೀಷ ಭಾಷೆಯಲ್ಲಿ ನೈಪುಣ್ಯತೆ ಹಾಗೂ ಕಂಪ್ಯೂಟರ ಜ್ಞಾನ ಹೊಂದಿರಬೇಕು. 21 ರಿಂದ 45 ವರ್ಷದೊಗಿರಬೇಕು.

ಆಸಕ್ತರು ಸ್ವ–ವಿವರಗಳೊಂದಿಗೆ ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹಾಗೂ ಇತ್ತೀಚಿನ ಭಾವಚಿತ್ರವನ್ನು ಅರ್ಜಿ ಜೊತೆಗೆ ಲಗತ್ತಿಸಿ ಜನವರಿ 9, 2025 ರಂದು ಸಂಜೆ 5.30 ರೊಳಗಾಗಿ ಉಪನಿರ್ದೇಶಕರು,ಮಹಿಳಾಮತ್ತುಮಕ್ಕಳ ಅ

ಶರಣ ಸಂಗಮ ಸಮಾರೋಪ, ಗುರುಬಸವ ದೇವರ ಪಟ್ಟಾಧಿಕಾರ ಮಹೋತ್ಸವ, ಉಚಿತ ಸಾಮೂಹಿಕ ವಿವಾಹ

ಶ್ರೀಮಠ ಸಮಾಜದಲ್ಲಿ ಶೋಷಿತರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದೆ: ಶೆಟ್ಟರ

ಗುಳೇದಗುಡ್ಡ:ಗುರುಸಿದ್ದೇಶ್ವರಮಠಕ್ಕೆತನ್ನದೇ ಆದ ಇತಿಹಾಸವಿದೆ. ಗುರುಸಿದ್ದೆಶ್ವರ ಮಠವು ಕ್ರಾಂತಿಕಾರ ಮಠವಾಗಿದ್ದು, ಸಾಂಕೇತಿ-ಕವಾದಂತಹ ಒಂದು ಪಟ್ಟಸಾಲಿ ನೇಕಾರ ಪೀಠವಾಗಿ ಬಸವರಾಜ ಪಟ್ಟದಾರ್ಯ ಶ್ರೀಗಳ ನೇತೃತ್ವದಲ್ಲಿ ಮುನ್ನಡೆಯುತ್ತಿದೆ. ಸಮಾಜದಲ್ಲಿ ಶೋಷಿತರು, ಬಡವರು, ಹಿಂದುಳಿದವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಶ್ರೀಮಠ ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಜಗದೀಶ ಶೆಟ್ಟರ ಹೇಳಿದರು.

ಅವರು ಶ್ರೀ ಜಗದ್ಗುರು ಗುರುಸಿದ್ದೇಶ್ವರ ಬ್ರಹನ್ಮಠದ ಶರಣ ಸಂಗಮ ಸಮಾರಂಭ, ಗುರುಬಸವ ದೇವರ ಪಟ್ಟಾಧೀಕಾರ ಮಹೋತ್ಸವ, ಸಂಸ್ಥೆಯ ಸುವರ್ಣ ಮಹೋತ್ಸವ, ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ,

ಗುರುಗಳ ಆದರ್ಶ ಪರಂಪರೆ ನಮ್ಮ ನಾಡಿನಲ್ಲಿದೆ. ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲದೇ ಇಡೀ ಭಾರತದಲ್ಲಿ ಗುರುಪರಂಪರೆ, ಮಠಾಧೀಶರ ನೇತೃತ್ವದಲ್ಲಿ ಅವರು ತೋ-ರಿದ ಆದರ್ಶ ಮಾರ್ಗದಲ್ಲಿ ನಡೆಯುವ ಲಕ್ಷಾಂತರ ಭಕ್ತರಿದ್ದಾರೆ. ಸಮಾಜದ ಬಗ್ಗೆ ಚಿಂತನೆ, ಸಂಘಟನೆ, ಒಳಿತಿಗಾಗ ಶ್ರೀಗಳ ನೇತೃತ್ವದಲ್ಲಿ ಕೆಲಸ ಮಾಡಬೇಕು. ನಮ್ಮ ದೇಶದಲ್ಲಿರುವವಿಶಿಷ್ಟವಾದಗುರುಪರಂಪರೆ ಮುಂದುವರೆಯಬೇಕು. ಸಮಾಜ ಸಮಾಜಗಳ ನಡುವೆ ಉಂಟಾಗುತ್ತಿರುವ ಸಂಘರ್ಷ ನಿಲ್ಲಬೇಕಿದೆ. ದೇಶ ದೇಶಗಳ ನಡುವೆ ಉಂಟಾಗುವ ಅಶಾಂತಿಯನ್ನು ತೊಡೆದು ಹಾಕಿ ಶಾಂತಿ ನೆಲೆಸಬೇಕಿದೆ ಎಂದು ಹೇಳಿದರು

ಮಾಜಿ ಸಚಿವ ಎಸ್.ಆರ್.ಪಾಟೀಲ ಮಾತನಾಡಿ, ಗುರುಸಿದ್ದೇಶ್ವರ ಮಠವು ಸರ್ವ ಜನಾಂಗದ ಶಾಂತಿಯ ತೋಟವಾಗಿ, ಜಾತಿ ಮತ ಪಂಥಗಳಿಲ್ಲದೇ ಎಲ್ಲರನ್ನೂ ಸಮನಾಗಿ ಕಾಣುತ್ತ ಬಂದಂತಹ ಮಠವಾಗಿದೆ. ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳು ಸಾಮಾಜಿಕ, ಶೈಕ್ಷಣಿಕವಾಗಿ ಸೇವೆ ಸಲ್ಲಿಸುತ್ತ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ತರಳಬಾಳು ಶಾಖಾ ಮಠವಾದ ಸಾಣೇಹಳ್ಳಿ ಬ್ರಹನ್ಮಠದ ಪಂಡಿತಾರಾಧ್ಯ ಮಹಾಸ್ವಾಮಿಗಳು ಮಾತನಾಡಿ, ಭಕ್ತರು ದಾರಿ ತಪ್ಪಿಸುತ್ತಿದ್ದಾರೆಂದರೆ ಗುರು ದಾರಿ ತಪ್ಪಬಾರದು. ಆಸೆ ಆಮಿಷಗಳಿಗೆ ಸ್ವಾಮೀಜಿಗಳು ಒಳಗಾಗಿ ನೀತಿ ನಿಯಮ, ನಿಷ್ಠುರತೆ ಬಿಟ್ಟುಕೊಡಬಾರದು. ಭಕ್ತ-ರಿಗೆ ಸ್ವಾಮೀಜಿಗಳಿಗೆ ಪರಸ್ಪರ ಎಚ್ಚರಿಸುವ ಸ್ವಭಾವ ಮೂಡಿದಾಗ ಸದೃಢ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಮನುಷ್ಯ ಎಂತಹದೇ ಸಮಸ್ಯೆ ಬಂದರು ಅವುಗಳನ್ನು ಎದುರಿಸುವಂಹತ ಎದೆಗಾ-ರಿಕೆ ಬೆಳೆಸಿಕೊಳ್ಳಬೇಕು. ಗುರು ಶಿಷ್ಯರ ನಡುವೆ ದೊಡ್ಡವರು ಸಣ್ಣವರು ಎಂಬ ಭಾವವಿರಬಾರದು. ಅಲ್ಲದೇ ಸ್ವಾಮೀಜಿಗಳಿಗೆ ಅಹಂಕಾರ ಬಹಳ ಅಪಾಯಕಾರಿಯಾಗಿದೆ. ವಿನಯ ಮತ್ತು ವಿವೇಕ ಬದುಕಿನ ಬಂಡವಾಳಗಬೇಕು. ಆಗ ಸಮಾಜವನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯಲು ಸಾಧ್ಯವಾಗುತ್ತದೆ ಎಂದರು.

ರಾಜ್ಯ ಸಭಾ ಸದಸ್ಯ ನಾರಾಣಸಾ ಭಾಂಢಗೆ, ಮಾಜಿ ಎಂ-ಎಲ್‌ಸಿ ಎಂ.ಡಿ.ಲಕ್ಷ್ಮೀನಾರಾಯಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಮಹಾಸ್ವಾಮಿಗಳು, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಮಹಾಸ್ವಾಮಿಗಳು, ಪದ್ಮಸಾಲಿ ಗುರುಪೀಠದ ಪ್ರಭುಲಿಂಗ ಶ್ರೀಗಳು, ಗಾಯತ್ರಿ ಪೀಠದ ದಯಾನಂದಪುರಿ ಮಹಾಸ್ವಾಮಿಗಳು, ಗದಗ ತೋಟದ ನಿಜಗುಣಾನಂದ ಮಹಾಸ್ವಾಮಿಗಳು, ಹುಬ್ಬಳ್ಳಿ ವೀರಭೀಕ್ಷಾವರ್ತಿ ಮಠದ ಶಿವಶಂಕರ ಶಿವಾಚಾರ್ಯ ಮಹಾಸ್ವಾಮಿಗಳು, ವೀರಭಿಕ್ಷಾವರ್ತಿ ನೀಲಕಂಠಮಠದ ನೀಲಕಂಠ ಪಟ್ಟದಾರ್ಯ ಮಹಾಸ್ವಾಮಿಗಳು, ಪ್ರಭುಲಿಂಗ ಮಹಾಸ್ವಾಮಿಗಳು, ಜಗದ್ಗುರು ಅಭಿನವ ಶಿವಾನಂದಮಹಾಸ್ವಾಮಿಗಳು, ಜ್ಞಾನಪ್ರಕಾಶ ಮಹಾಸ್ವಾಮಿಗಳು, ಸದಾಶಿವಾನಂದ ಮಹಾಸ್ವಾಮಿಗಳು, ದಿವ್ಯಾಜ್ಞಾನಾನಂದಗಿರಿ ಸ್ವಾಮಿಗಳು, ಶರಣಬಸವ ಸ್ವಾಮಿಗಳು, ಮಲ್ಲಿಕಾರ್ಜುನ ದೇವರು, ವೀರಬಸವ ದೇವರು ಸೇರಿದಂತೆ ನಾಡಿನ ಮಠಾಧೀಶರು ಸಾನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ಶಾಸಕ ಭಿಮಸೇನ ಚಿಮ್ಮನಕಟ್ಟಿ, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ, ರಾಜಶೇಖರ ಶೀಲವಂತರ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಟಿ.ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಮುಖಂಡರಾದ ಸಂ-ಜಯ ಬರಗುಂಡಿ, ಡಾ.ಕೆ.ಪಿ.ಗುರುಸ್ವಾಮಿ, ಎಸ್.ಸೋಮಶೇಖರ, ಸುರೇಶ ಹೊನ್ನಪ್ಪಗೊಳ, ಎಸ್.ಐ.ಚಿಂದಿ, ಅಶೋಕ ಹೆಗಡಿ, ಮುರಿಗೆಪ್ಪ ನಾರಾ, ಆನಂದ ತಿಪ್ಪಾ, ವಿನೋದ ಮದ್ದಾನಿ ಸೇರಿದಂತೆ ಇತರರು ಇದ್ದರು.

ನೂತನ ಜಗದ್ಗುರು ಅಡ್ಡಪಲ್ಲಕ್ಕಿ ಉತ್ಸವ

ಗುಳೇದಗುಡ್ಡ : ಪಟ್ಟಣದ ಶ್ರೀ ಜಗದ್ಗುರು ಗುರುಸಿದ್ದೇಶ್ವರ ಬೃಹನ್ಮಠದಲ್ಲಿ ಶ್ರೀ ಜಗದ್ಗುರು ಗುರುಸಿದ್ದ ಪಟ್ಟದಾರ್ಯ ಮಹಾಸ್ವಾಮಿಗಳ 39 ನೇ ಪುಣ್ಯಾರಾಧನೆಯ ಶರಣ ಸಂಗಮ ಸಮಾರಂಭದ ಕೊನೆಯ ದಿನದಂದು ಪಟ್ಟಸಾಲಿ ನೇಕಾರ ಪೀಠದ ನೂತನ ಜಗದ್ಗುರು ಶ್ರೀಜಗದ್ಗುರು ಗುರುಸಿದ್ದ ಪಟ್ಟದಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಮತ್ತು ಲಿಂ.ಶ್ರೀಗಳ ರಜತ ಮೂರ್ತಿಯ ಭವ್ಯ ಮೆರವಣಿಗೆ ಬಹಳಷ್ಟು ಸಡಗರ, ಸಂಭ್ರಮದಿಂದ ನಡೆಯಿತು.

ಶ್ರೀಮಠದಲ್ಲಿ ನೂತನ ಶ್ರೀಜಗದ್ಗುರು ಗುರುಸಿದ್ದ ಪಟ್ಟದಾರ್ಯ ಶ್ರೀಗಳು ಹಾಗೂ ಶ್ರೀಜಗದ್ಗುರು ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಬೆಳ್ಳಿಯ ಅಡ್ಡಪಲ್ಲಕ್ಕಿ ಹಾಗೂ ಲಿಂ.ಗುರುಸಿದ್ದ ಶ್ರೀಗಳ ರಜತ ಮೂರ್ತಿಗೆ ವಿಶೇಷ ಪೂಜೆ, ಮಹಾಮಂಗಳಾರತಿ ಸಲ್ಲಿಸಲಾಯಿತು.

ಬಳಿಕ ಶ್ರೀಮಠದಿಂದ ಕಂಠಿಪೇಟೆ, ಗಚ್ಚಿನಕಟ್ಟಿ, ಚೌಬಜಾರ, ಅರಳಿಕಟ್ಟಿ, ಹೊಸಪೇಟೆ ಸರ್ಕಲ್, ಸಾಲೇಶ್ವರ ದೇವಸ್ಥಾನ, ಪವಾರ್ ಕ್ರಾಸ್, ಪುರಸಭೆ, ಸರಾಫ ಬಜಾರ ಮೂಲಕ ಹಾಯ್ದು ಶ್ರೀಮಠಕ್ಕೆ ಬಂದು ತಲುಪಿತು. ಮೆರವಣಿಗೆಯಲ್ಲಿ ಆನೆಯ ಮೇಲೆ ಲಿಂ.ಶ್ರೀಗುರುಸಿದ್ದ ಶ್ರೀಗಳ ಹಾಗೂ ವಚನ ಕಟ್ಟುಗಳ ಮೆರವಣಿಗೆ ಜರುಗಿತು. ಇದು ಸಾರ್ವಜನಿಕರ ಆಕರ್ಷಣೆಗೆ ಕಾರಣವಾಯಿತು. ಇಕ್ಕೆಡೆಗಳಲ್ಲಿ ಅಪಾರ ಭಕ್ತರು ಅಡ್ಡಪಲ್ಲಕ್ಕಿಯಲ್ಲಿ ವಿರಾಜಮಾನರಾದ ಶ್ರೀಗಳ ಹಾಗೂ ಲಿಂ.ಶ್ರೀಗಳ ರಜ-ತ ಮೂರ್ತಿಗೆ ಪೂಜೆ ಸಲ್ಲಿಸಿ ದರ್ಶನಾಶೀರ್ವಾದ ಪಡೆದರು. ಮೆರವಣಿಗೆಯಲ್ಲಿ ಮಹಿಳೆಯರ ಕುಂಭ ಕಳಸ ಮೆರವಣಿಗೆ, ಡೊಳ್ಳು ಕುಣಿತ, ಹಲಗೆ ಮಜಲು, ಕರಡಿ ಮಜಲು ಸೇರಿದಂತೆ ಅನೇಕ ಜನಪದ ವಾದ್ಯ ಮೇಳಗಳು ಮೆರವಣಿಗೆಗೆ ವಿಶೇಷ ಕಳೆ ತಂದವು. ಕಾರ್ಯಕ್ರಮದಲ್ಲಿ ಶಾಸಕ ಬಿ.ಬಿ.ಚಿಮ್ಮನಕಟ್ಟಿ, ಸಂಸ್ಥೆ ಚೇರಮನ್ ರಾಜು ಜವಳಿ, ಎಚ್.ಶಿವಪ್ಪಶೆಟ್ಟಿ, ಸಂಜಯ ಬರಗುಂಡಿ, ಚಂದ್ರಕಾಂತ ಶೇಖಾ ಇತರರು ಇದ್ದರು.

ಜಗದ್ಗುರುಗಳಿಗೆ ನಾಮಕರಣ : ಶ್ರೀ ಜಗದ್ಗುರು ಗುರುಸಿದ್ದೇಶ್ವರ ಬೃಹನ್ಮಠದ ಮೂರನೇ ತಲೆಮಾರಿನ ಜಗದ್ಗುರುಗಳ ಪಟ್ಟಾಧಿಕಾರ ಮಹೋತ್ಸವದಲ್ಲಿ ಶ್ರೀಗುರುಬಸವ ದೇವ-ರಿಗೆ ಪಟ್ಟಾಧಿಕಾರ ಬಳಿಕ ಶ್ರೀ1008 ಜಗದ್ಗುರು ಗುರುಸಿದ್ದ ಪಟ್ಟದಾರ್ಯ ಮಹಾಸ್ವಾಮಿಗಳು ಎಂದು ಅಭಿದಾನವನ್ನು ದಯಪಾಲಿಸಿದರು.

ಶ್ರೀಜಗದ್ಗುರು ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳು ಗುರುಬಸವ ದೇವರಿಗೆ ಗುರುದೀಕ್ಷೆ ಅನುಗ್ರಹಿಸಿದರು.

ಗೌರಮ್ಮ ಮಲ್ಲಿಕಾರ್ಜುನ ಕಮತಗಿ ನಿಧನ

ಬಾಗಲಕೋಟೆ : ವಿಜಯಪುರ ಜಿಲ್ಲೆ ಸಿಂದಗಿ ಮೂಲದ ಬಾಗಲಕೋಟೆಯ ವಿದ್ಯಾಗಿರಿ ನಿವಾಸಿ ಗೌರಮ್ಮ ಮಲ್ಲಿಕಾರ್ಜುನ ಕಮತಗಿ(79) ನಿಧನ ಹೊಂದಿದರು.

ಅವರು ಮುಖಂಡ ವಿಜಯಕುಮಾರ ಕಮತಗಿ ಸೇರಿ ಇಬ್ಬರು ಪುತ್ರರು, ಓರ್ವ ಪುತ್ರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಸಂಜೆ ನಗರ ಹೊರವಲಯದ ಮಲ್ಲಾಪೂರ ರುದ್ರಭೂಮಿಯಲ್ಲಿ ಜರುಗಿತು. ಗೌರಮ್ಮ ಅವರ ನಿಧನಕ್ಕೆ ಶಾಸಕ ಎಚ್.ವೈ.ಮೇಟಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ ಸರನಾಯಕ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಬಸವೇಶ್ವರ ಬ್ಯಾಂಕ್ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಸೇರಿ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಅತ್ಯುತ್ತಮ ಪ್ರಗತಿಪರ ರೈತ ಮಹಿಳೆ ಪ್ರಶಸ್ತಿ ಹಾಗೂ ಗೌರವಧನ ಸತ್ಕಾರಕ್ಕೆ ಅರ್ಜಿ ಆಹ್ವಾನ

ಕೊಪ್ಪಳ : ಕೃಷಿ ತಂತ್ರಜ್ಞರ ಸಂಸ್ಥೆ ವತಿಯಿಂದ, ರೈತ ಮಹಿಳೆಯರ ಸಾಧನೆಗಳನ್ನು ಹಾಗೂ ಕೃಷಿಯಲ್ಲಿನ ಅವರ ವೈಶಿಷ್ಟತೆಯನ್ನು ಗುರುತಿಸಿ ರಾಜ್ಯಮಟ್ಟದಲ್ಲಿಸತ್ಕರಿಸುವ ಉದ್ದೇಶವನ್ನು ಕೃಷಿ ತಂತ್ರಜ್ಞರ ಸಂಸ್ಥೆಯು ಹೊಂದಿದ್ದು, ಮಹಿಳೆಯೊಬ್ಬರಿಗೆ "ಅತ್ಯುತ್ತಮ ಶ್ರೇಷ್ಠ ಪ್ರಗತಿಪರ ರೈತ ಮಹಿಳೆ" ಎಂಬ ಪ್ರಶಸ್ತಿ ಹಾಗೂ ಗೌರವದೊಂದಿಗೆ 2025ರ ಮಾರ್ಚ್ 8ರ ಸಮಾರಂಭದಲ್ಲಿ ಸತ್ಕರಿಸಲು ಜಿಲ್ಲೆಯ ಅರ್ಹ ರೈತ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರು ಸಣ್ಣ ರೈತ ಸದಸ್ಯರಾಗಿರಲೇಬೇಕು. ಅಂದರೆ ಅರ್ಜಿದಾರರು ಹೆಚ್ಚಂದರೆ 05 ಎಕರೆ ಮಾತ್ರ ಜಮೀನು ಹೊಂದಿರಬೇಕು. ದೊಡ್ಡ ರೈತರನ್ನು ಪ್ರಶಸ್ತಿಗೆ ಪರಿಗಣಿಸುವಂತಿಲ್ಲ. ಅರ್ಜಿದಾರರು ಈಗಾಗಲೇ ರಾಜ್ಯಮಟ್ಟದಲ್ಲಿ ಸಂದಾಯವಾಗುವ ಕೃಷಿ ಪಂಡಿತ, ಉದಯೋನ್ಮುಖ ಕೃಷಿ ಪಂಡಿತ ಅಥವಾ ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಇತ್ಯಾದಿಗಳನ್ನು ಪಡೆದಿದ್ದಲ್ಲಿ ಅಂತವರ ಅರ್ಜಿಯನ್ನು ಪರಿಗಣಿಸುವುದಿಲ್ಲ.

ಅರ್ಜಿಯನ್ನು 2025ರ ಜನವರಿ 20 ರೊಳಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ನಿಗದಿತ ನಮೂನೆಯಲ್ಲಿ ಸಲ್ಲಿಸಬಹುದಾಗಿದೆ. ಅಂತಿಮವಾಗಿ ಆಸಕ್ತ ರೈತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಈ ಪ್ರಶಸ್ತಿಗೆ ಆಯ್ಕೆಯಾದ ರೈತ ಮಹಿಳೆಯರನ್ನು ಮಾರ್ಚ್ 8 ರಂದು ಏರ್ಪಡಿಸುವ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ"ಯ ಸಮಾರಂಭದಲ್ಲಿ ಗೌರವಧನದೊಂದಿಗೆ ಸತ್ಕರಿಸಲಾಗುವುದು ಎಂದು ಕೊಪ್ಪಳ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆಲೋಶಿಪ್ ವಿದ್ಯಾರ್ಥಿಗಳ ಶಿಷ್ಯವೇತನಕ್ಕೆ ಅರ್ಜಿ

ಬಾಗಲಕೋಟೆ : ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಪ್ರಸಕ್ತ ಸಾಲಿಗೆ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪೋಸ್ಟ್ ಡಾಕ್ಟರಲ್ ಫೆಲೋಶಿಪ್ ಮಾಡುತ್ತಿರುವ 100 ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಯಾವುದೇ ಫೆಲೋಶಿಪ್ ಪಡೆಯದಿದ್ದಲ್ಲಿ ಮಾಸಿಕ 25 ಸಾವಿರ ರೂ.ಗಳಂತೆ ಶಿಷ್ಯವೇತನ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯಿಂದ ಅರ್ಜಿ ನಮೂನೆ ಪಡೆದುಕೊಂಡು ಅಗತ್ಯ ದಾಖಲೆಗಳೊಂದಿಗೆಡಿಸೆಂಬರ24 ರೊಳಗಾಗಿ ಸಲ್ಲಿಸುವಂತೆ ಸಮಾಜ ಕಲ್ಯಾನ ಇಲಾಖೆಯ ಸಹಾಯಕ ನಿರ್ದೇಶಕಿ ಸಾಹಿರಾಬಾನು ನಧಾಪ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-221821ಗೆ ಸಂಪರ್ಕಿಸಬಹುದಾಗಿದೆ.

ಪ್ರಭುಲಿಂಗ ಸೌಹಾರ್ದಕ್ಕೆ ಉತ್ತಮ ಸಹಕಾರಿ ಪ್ರಶಸ್ತಿ

ಜಮಖಂಡಿ : ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ ಸಂಘಕ್ಕೆ ಪ್ರಸಕ್ತ ಸಾಲಿನ ಜಿಲ್ಲಾ ಮಟ್ಟದ ಉತ್ತಮ ಸಹಕಾರಿ ಸಂಘ ಪ್ರಶಸ್ತಿ ದೊರೆತಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ಸಾಕ್ಷಾತ್ಕಾರ ಭವನದಲ್ಲಿ ಸುದ್ದಿಗಾರರೊಂದಿಗೆಮಾತನಾಡಿದಅವರು, 2003 ರಲ್ಲಿ ಪ್ರಾರಂಭಗೊಂಡ ಸಹಕಾರಿ ಸಂಘ 2018 ರ ಹೊತ್ತಿಗೆ 12 ಶಾಖೆಗಳನ್ನು ವಿಸ್ತರಿಸುವಮೂಲಕಉತ್ತಮವಾಗಿಕಾರ್ಯ ನಿರ್ವಹಿಸುತ್ತಿದೆ. ಸಣ್ಣ ಕೈಗಾರಿಕೆಗಳು ಗುಡಿ ಕೈಗಾರಿಕೆಗಳು ಹಾಗೂ ಬೀದಿಬದಿ ವ್ಯಾಪಾರಿಗಳಿಗೆಸಾಲಸೌಲಭ್ಯಗಳನ್ನುಕಲ್ಪಿಸುವ ಸಹಿತ ಸಹಕಾರ ಕ್ಷೇತ್ರದಲ್ಲಿ ದಾಪು-ಗಾಲು ಇಡುತ್ತಿದೆ. 10 ಕೋಟಿ ಶೇರು ಬಂಡವಾಳ 3,764 ಸದಸ್ಯರನ್ನು ಹೊಂದಿದೆ. 13 ಕ್ಕೂ ಹೆಚ್ಚು ರೀತಿಯ ಸಾಲಗಳನ್ನು ಸಂಘದಿಂದ ನೀಡಲಾಗುತ್ತಿದೆ. 80 ಜನ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು, 430 ಕೋಟಿ ರೂಪಾಯಿ ಠೇವಣಿ ಹೊಂದಿದೆ. 400 ಕೋಟಿಯಷ್ಟು ಸಾಲವನ್ನು ನೀಡಲಾಗಿದೆ. ಮೈಕ್ರೋ ಫೈನಾನ್ಸ ವ್ಯವಸ್ಥೆಯ ರೀತಿ ತ್ವರಿತ ಸಾಲ ನೀಡಲಾಗುತ್ತಿದ್ದು ಗ್ರಾಹಕರಿಗೆ ಸಾಕಷ್ಟು ಅನುಕೂಲವಾಗಿದೆ ಎಂದರು.

ಸಹಕಾರ ಸಂಘಕ್ಕೆ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ ಹಾಗೂ ಇಥೆನಾಲ್ ಉತ್ಪಾದನಾ ಘಟಕ ಬೆನ್ನೆಲುಬಾಗಿದ್ದು ಸಂಘದ ಬೆಳವಣಿಗೆಗೆ ಸಹಕಾರಿಯಾಗಿದೆ. ವಿಶೇಷ ಸೇವೆಗಳನ್ನು ಸಹಕಾರ ಸಂಘದಿಂದ ನೀಡಲಾಗುತ್ತಿದ್ದು ಆರ್. ಡಿ.ಎ.ಐ. ನಿಂದ ವಿಮಾಲೈಸನ್ಸಪಡೆಯಲಾಗಿದ್ದುಜೀವವಿಮೆ, ವಾಹನ ವಿಮೆ, ಅಪಘಾತ ವಿಮೆ, ಆರೋಗ್ಯ ವಿಮೆಗಳನ್ನುಗ್ರಾಹಕರಿಗೆಒದಗಿಸಲಾಗುತ್ತದೆ. ಅದರಂತೆ ಪ್ಯಾನ್ ಕಾರ್ಡ್, ರೈಲ್ವೆ ಟಿಕೆಟ್ ಬುಕಿಂಗ್,ಮೈಕ್ರೋ ಎಟಿಎಂ ವ್ಯವಸ್ಥೆ,ಪಹಣಿ ಉತಾರ, ಪಾಸ್ ಪೋರ್ಟಗಳನ್ನು ನೀಡುವ ಪರವಾನಿಗೆಗಳನ್ನು ಸಂಘ ಹೊಂದಿದೆ ಎಂದರು.

ಇದೇ ಸಂದರ್ಭದಲ್ಲಿ ನಿರ್ದೇಶಕರಾದ ನೇಮಣ್ಣ ಜಮಖಂಡಿ, ಚೆನ್ನಪ್ಪ ಮಾಳವಾಡ, ವಿದ್ಯಾವತಿ ಮಳೆಮಠ,ಪಾರ್ವತಿ ಗುಡಗುಂಟಿ, ರಾಜೇಂದ್ರಕುಮಾರ ಗುಡಗುಂಟಿ, ನಾಗಪ್ಪ ಸನದಿ, ದೇವಲ ದೇಸಾಯಿ, ಮಲ್ಲಿಕಾರ್ಜುನ ಕೊಡ್ಲಿವಾಡಮಠ, ಬಸಯ್ಯ ಮಹಾಲಿಂಗಪೂರ, ಮಲ್ಲಪ್ಪ ಕೋಟಿ, ಹಣಮಂತ ದಾಸರ, ಮಹಾಂತೇಶ ಹಿಟ್ಟಿನಮಠ,ಪ್ರಕಾಶಕಾಲತಿಪ್ಪಿ,ವಿರುಪಾಕ್ಷಯ್ಯ ಗುಡಗುಂಟಿ, ಪ್ರಭು ಅಕ್ಕಿವಾಟ, ನಿಂಗಪ್ಪ ತಳವಾರ, ಪ್ರಧಾನ ವ್ಯವಸ್ಥಾಪಕ ಮಹೇಶ ಮಠಪತಿ ಉಪಸ್ಥಿತರಿದ್ದರು.

ಸುಭದ್ರ ದೇಶದ ನಿರ್ಮಾಣಕ್ಕೆ ಸಹಕಾರಿ ರಂಗದ ಕೊಡುಗೆ ಅಪಾರ



ರಬಕವಿ-ಬನಹಟ್ಟಿ : ಜಗತ್ತಿನಲ್ಲಿ ಆರ್ಥಿಕವಾಗಿ ಭಾರತ ಮೂರನೇ ಸ್ಥಾನದಲ್ಲಿರಲು ಸಹಕಾರಿ ಕ್ಷೇತ್ರದ ಬಹುದೊಡ್ಡ ಕೊಡುಗೆಯಿದೆ ಎಂದು ಉದ್ಯಮಿ ಶಂಕರ ಜುಂಜಪ್ಪನವರ ತಿಳಿಸಿದರು.

ನಗರದ ಭದ್ರನ್ನವರ ಕಲ್ಯಾಣಮಂಟಪದಲ್ಲಿ ಜರುಗಿದ ಸಹಕಾರಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಪೂರ್ವದಿಂದಲೂ ಸಹಕಾರಿ ಚಳವಳಿಯು ಇದೀಗ ಕ್ರಾಂತಿಯ ರೀತಿಯಲ್ಲಿ ಬೆಳೆದಿದೆ. ಸಾಮಾನ್ಯರಿಗಾಗಿ ಇರುವ ಸಹಕಾರಿ ಸಂಸ್ಥೆಗಳು ಇಂದು ಪ್ರಗತಿ ಸಾಧಿಸುವ ಜೊತೆಗೆ ಉತ್ತಮ ವ್ಯವಹಾರ ಜ್ಞಾನ ಕಲ್ಪಿಸಿಕೊಟ್ಟಿದೆ ಎಂದರು.

ಕಾಡಸಿದ್ಧೇಶ್ವರ ಸಹಕಾರಿ ಬ್ಯಾಂಕ್ನ ಅಧ್ಯಕ್ಷ ಸುರೇಶ ಅಬಕಾರ ಮಾತನಾಡಿ

ಬೆಳಗಾವಿಯಲ್ಲಿ ಲಾಠಿ ಚಾರ್ಜ ದುರದೃಷ್ಟಕರ: ತಿಮ್ಮಾಪೂರ

ಜಮಖಂಡಿ : ಬೆಳಗಾವಿಯಲ್ಲಿ ಪಂಚಮಸಾಲಿ ಹೋರಾಟಗಾರರ ಮೇಲೆ ಲಾಠಿ ಪ್ರಹಾರ ನಡೆಯಬಾರದಿತ್ತು. ಕಾನೂನು ಕೈಗೆತ್ತಿಕೊಂಡಾಗ ಇಂಥಹ ಘಟನೆಗಳಾಗುತ್ತವೆ. ಹೋರಾಟ ಮಾಡುವುದು ಎಲ್ಲರ ಹಕ್ಕು. ಆದರೆ ನಿಯಮ ಮೀರಬಾರದು ಎಂದು ಅಬಕಾರಿ ಸಚಿವ ಆರ್. ಬಿ. ತಿಮ್ಮಾಪೂರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿಯಲ್ಲಿ ಅಧಿವೇಶನದ ಸಂದರ್ಭದಲ್ಲಿ ಪ್ರತಿಭಟನಾಕಾರರು ಶಾಂತ ರೀತಿಯಿಂದ ತಮ್ಮ ಹೋರಾಟ ನಡೆಸಬೇಕಿತ್ತು. ಆದರೆ ಏಕಾಏಕಿ ಸಾವಿರಾರು ಸಂಖ್ಯೆಯಲ್ಲಿ ಜನ ಜಮಾವಣೆಯಾಗಿ ಕಾನೂನು ಕೈಗೆತ್ತಿಕೊಂಡಾಗ ಲಾಠಿ ಪ್ರಹಾರ ನಡೆದಿದೆ. ಈ ಕುರಿತು ಸರ್ಕಾರ ತನಿಖೆ ನಡೆಸಲಿದೆ. ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾಡುವುದು ಶಾಂತ ರೀತಿಯಲ್ಲಿ ಇರಬೇಕು.

ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನ ಹಾಗೂ ಸಂತ್ರಸ್ಥರಿಗೆ ಪರಿಹಾರ ಒದಗಿಸಲು ಆಗ್ರಹಿಸಿ ಜಿಲ್ಲೆಯಲ್ಲಿ ನಡೆಯುತ್ತಿರುವ ಸತ್ಯಾಗ್ರಹದ ಬಗ್ಗೆ ಸದನದಲ್ಲಿ ಚರ್ಚೆ ನಡೆದಿದೆ. ಸದಸ್ಯರಾದ ಉಮಾಶ್ರೀ, ಪಿ. ಎಚ್. ಪೂಜಾರ, ನಿರಾಣಿ ಮಾತನಾಡಿದ್ದಾರೆ. ಸರ್ಕಾರ ಉತ್ತರ ನೀಡಿದೆ. ಮುಖಂಡರ ಜತೆಗೆ ಚರ್ಚಿಸಲು ಸರ್ಕಾರ ಮುಂದಾಗಿದ್ದು ಬರುವ ಸೋಮವಾರ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಮುಖಂಡರ ಜತೆಗೆ ಚರ್ಚೆ ನಡೆಸಲಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಉದ್ಯಮಿಗಳಾದ ತೌಫಿಕ್ ಪಾರ್ಥನಳ್ಳಿ, ಮಾಮೂನ ರಶೀದ ಪಾರ್ಥನಳ್ಳಿ, ಅಬುಬಕರ ಕುಡಚಿ ಸಹಿತ ಹಲವರು ಉಪಸ್ಥಿತರಿದ್ದರು.

ಪೋಷನ್ ಅಭಿಯಾನ: ಯೋಜನಾ ಸಹಾಯಕ ಹುದ್ದೆಗೆ ಭರ್ತಿ

ಬಾಗಲಕೋಟೆ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪೋಷನ್ ಅಭಿಯಾನ ಯೋಜನೆಯಡಿ ನೇರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಯೋಜನಾ ಸಹಾಯಕರ ಹುದ್ದೆ ಭರ್ತಿಗಾಗಿ 11 ತಿಂಗಳ ಅವಧಿಗೆ ಅಥವಾ ಯೋಜನೆ ಜಾರಿಯಲ್ಲಿರುವವರೆಗೆ ಹಾಗೂ ಷರತ್ತುಗಳಿಗೆ ಒಳಪಟ್ಟು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ಯೋಜನಾ ಸಹಾಯಕರ ಹುದ್ದೆಗೆ ಮಾಸಿಕ ಗೌರವಧನ 18 ಸಾವಿರ ರೂ.ಗಳನ್ನು ನೀಡಲಾಗುತ್ತಿದ್ದು, ಹುದ್ದೆಗೆ ಅರ್ಜಿ ಸಲ್ಲಿಸುವವರು ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಅಥ–ವಾ ಪಿಜಿ ಡಿಪ್ಲೋಮಾ ಇನ್ ಮ್ಯಾನೇಜಮೆಂಟ್, ಸೋಷಿಯಲ್ ಸಾಯಿನ್ಸ್ ಅಥವಾ ನ್ಯೂಟ್ರಿಶನ್ ವಿದ್ಯಾರ್ಥಿಗಳು ಹೊಂದಿದ್ದು, ಕನಿಷ್ಠ 2 ವರ್ಷದ ಕೆಲಸ ಅನುಭವ ಹೊಂದಿರಬೇಕು.

ಇಂಗ್ಲೀಷ ಭಾಷೆಯಲ್ಲಿ ನೈಪುಣ್ಯತೆ ಹಾಗೂ ಕಂಪ್ಯೂಟರ ಜ್ಞಾನ ಹೊಂದಿರಬೇಕು. 21 ರಿಂದ 45 ವರ್ಷದೊಗಿರಬೇಕು.

ಆಸಕ್ತರು ಸ್ವ–ವಿವರಗಳೊಂದಿಗೆ ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹಾಗೂ ಇತ್ತೀಚಿನ ಭಾವಚಿತ್ರವನ್ನು ಅರ್ಜಿ ಜೊತೆಗೆ ಲಗತ್ತಿಸಿ ಜನವರಿ 9, 2025 ರಂದು ಸಂಜೆ 5.30 ರೊಳಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾಡಳಿತ ಭವನ, ರೂನಂ.224, ನವನಗರ, ಬಾಗಲಕೋಟೆ ಇವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂಸಂ.08354–297708ಗೆ ಸಂಪರ್ಕಿಸುವಂತೆ ಉಪನಿರ್ದೇಶಕ ಕೆ.ಪ್ರಭಾಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗೆ ಅಪೂರ್ಣ ಅರ್ಜಿಗೆ ಪುನ್ ಅರ್ಜಿ ಸಲ್ಲಿಕೆಗೆ ಅವಕಾಶ

ಬಾಗಲಕೋಟೆ : ಜಿಲ್ಲೆಯ ಬೀಳಗಿ, ಬಾದಾಮಿ, ಹುನಗುಂದ, ಜಮಖಂಡಿ, ಮುಧೋಳ ಶಿಶುಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿನ ವಿವಿಧ ಗ್ರಾ.ಪಂ, ಪಟ್ಟಣ ಪಂಚಾಯತ, ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಖಾಲಿ ಇರುವ ಒಟ್ಟು 106 ಅಂಗನವಾಡಿ ಕಾರ್ಯಕರ್ತೆ ಹಾಗೂ 471 ಅಂಗನವಾಡಿ ಸಹಾಯಕಿಯರ ಗೌರವ ಸೇವೆ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ ನವೆಂಬರ 15 ವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿ–ತ್ತು.

ಪ್ರಸ್ತುತ ಅರ್ಜಿ ಸಲ್ಲಿಸುವ ಕಾಲಾವಧಿ ಮುಗಿದಿದ್ದು, ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಒಟ್ಟು 4 ವಿವಿಧ ಹಂತಗಳಿದ್ದು, ಇದರಲ್ಲಿ ಕೆಲವರಿಗೆ 1ನೇ ಹಂತದಲ್ಲಿಯೇ ಅಪ್ಲಿಕೇಷನ್ ಸೆಕ್ಸೆಸ್‌ಫುಲ್ ಅಪಲೋಡ್ ಎಂಬ ಮೆಸೇಜ್ ಅವರುಗಳ ಮೊಬೈಲ್‌ಗೆ ಸ್ವೀಕೃತವಾಗಿರುವದರಿಂದ ಅರ್ಜಿಗಳನ್ನು ಪೂರ್ಣಗೊಳಿಸಿರುವದಿಲ್ಲ.

ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗೆ 1193 ಅಪೂರ್ಣ ಅರ್ಜಿಗಳು ಹಾಗೂ ಸಹಾಯಕಿ–ಯರ ಹುದ್ದೆಗೆ 1412 ಅಪೂರ್ಣ ಅರ್ಜಿಗಳು ಸ್ವೀಕೃತವಾಗಿರುತ್ತವೆ.

ಸರಕಾರದ ಆದೇಶದನ್ವಯ ಅರ್ಜಿ ಸಲ್ಲಿಸುವ 4 ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ಡಿಸೆಂಬರ 26 ರಿಂದ ಜನವರಿ 5, 2025 ವರೆಗೆ ಅರ್ಜಿಗಳನ್ನು ಪೂರ್ಣಗೊಳಿಸಲು ವೆಬ್‌ಸೈಟ್‌ನಲ್ಲಿ ಇಲಾಖಾ ವತಿಯಿಂದಲೇ ಅವಕಾಶ ನೀಡಿ ಆದೇಶಿಸಲಾಗಿದೆ. ಅಭ್ಯರ್ಥಿಗಳು ಮೊದಲೇ ಹಂತ ಆನ್‌ಲೈನ್‌ನಲ್ಲಿ ಅರ್ಜಿ ನಮೂನೆಯಲ್ಲಿ ಮಾಹಿತಿ ತುಂಬುವುದು. 2ನೇ ಹಂತದಲ್ಲಿ ಭಾವಚಿತ್ರ ಮತ್ತು ಸಹಿ ಅಪ್‌ಲೋಡ್ ಮಾಡಬೇಕು. 3ನೇ ಹಂತದಲ್ಲಿ ದಾಖಲಾತಿ ಅಪಲೋಡ್ ಮಾಡಬೇಕು. 4ನೇ ಹಂತ ಆಧಾರ ಸಂಖ್ಯೆ ನಮೂದಿಸಿ, ಇ–ಹಸ್ತಾಕ್ಷರದೊಂದಿಗೆ ಅರ್ಜಿ ಪೂರ್ಣಗೊಳಿಸಬೇಕು ಎಂದು ಉಪನಿರ್ದೇಶಕ ಕೆ.ಪ್ರಭಾಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿವೃದ್ಧಿಗೆ ಅನುದಾನ ಮಂಜೂರಿ: ಶಾಸಕ ಗುಡಗುಂಟಿ

ಜಮಖಂಡಿ : ಕ್ಷೇತ್ರದ ಅಭಿವೃದ್ಧಿಗಾಗಿ, ವಿವಿಧ ಕಾಮಗಾರಿಗಳ ಮಂಜೂರಾತಿಗಾಗಿ ಸದನದಲ್ಲಿ 32 ಪ್ರಶ್ನೆಗಳನ್ನು ಕೇಳಲಾಗಿತ್ತು. ಈ ಪೈಕಿ ಕ್ರಿಯಾಯೋಜನೆಗೆ 8 ಕೋಟಿ ಸಹಿತ ಮೂರು ಯೋಜನೆಗಳು ಸೇರಿ 13 ಕೋಟಿ ಅನುದಾನ ನೀಡಲು ರಾಜ್ಯಸರ್ಕಾರ ಒಪ್ಪಿಗೆ ಸೂಚಿಸಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು. ನಗರದ ಶಾಸಕರ ಕಛೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಮಖಂಡಿ ಕ್ಷೇತ್ರದ ಅಭಿವೃದ್ಧಿಗಾಗಿ ಜನಸಂಖ್ಯೆಗೆ ಅನುಗುಣವಾಗಿ ರಸ್ತೆಗಳ ನಿರ್ಮಾಣ ಶಾಲಾ ಕಾಲೇಜುಗಳ ನಿರ್ಮಾಣ ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅಂದಾಜು 21 ಕೋಟಿ ಅನುದಾನ ಮಂಜೂರು ಮಾಡುವ ಭರವಸೆ ರಾಜ್ಯ ಸರ್ಕಾರ ನೀಡಿದೆ ಎಂದರು. ಬೆಳಗಾವಿ ಅಧಿವೇಶನದಲ್ಲಿ ಕೇವಲ ಕಾಲಹರಣವಾಯಿತು: ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚಿಸಲು ಹೆಚ್ಚು ಅವಕಾಶಗಳು ದೊರಕಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಸುಮಾರು 22 ಹಳ್ಳಿಗಳು ಜಮಖಂಡಿ ನಗರಕ್ಕೆ ಹತ್ತಿರವಾಗಿವೆ. ಇದರಿಂದ ಜಮಖಂಡಿ ನಗರದ ಜನಸಂಖ್ಯೆ ಹೆಚ್ಚಿದೆ. ಜನಸಂಖ್ಯೆಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕಾದ ಅನಿವಾರ್ಯತೆ ಇದೆ ಎಂದರು.

ಆಲಮಟ್ಟಿ ಜಲಾಶಯದಲ್ಲಿ 524.256 ಮೀ. ನೀರು ಸಂಗ್ರಹಿಸಲು ಮುಖ್ಯಮಂತ್ರಿಗಳು ಒಪ್ಪಿಗೆ ನೀಡಿದ್ದಾರೆ. ಮೂರು ವರ್ಷಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ 130 ಟಿಎಂಸಿ ನೀರು ಸಂಗ್ರಹಿಸಲು ಸರ್ಕಾರ ಚಿಂತನೆ ನಡೆಸಿದೆ. ಇದರಿಂದ ಹದಿನೈದು ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದು. ಸರ್ಕಾರದ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲದ ಕಾರಣ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿವೆ ಎಂದರು.

ಜಮಖಂಡಿ ನಗರದಲ್ಲಿ ಯುಜಿಡಿ ಸಮಸ್ಯೆಯಿದೆ. ವಿಸ್ತೃತ ಯೋಜನೆ ರೂಪಿಸಿ ಕೊಳಚೆ ನೀರು ಹೊರಗಡೆ ಹೋಗುವಂತೆ ಕ್ರಮ ಜರುಗಿಸಬೇಕಾಗಿದೆ. ಸಚಿವ ಕೃಷ್ಣ ಭೈರೇಗೌಡರ ಜೊತೆ ಮಾತನಾಡಿದ್ದು ಕ್ರಿಯಾ ಯೋಜನೆ ಸಿದ್ಧಪಡಿಸಲು ತಿಳಿಸಿದ್ದು, ಅದರಂತೆ ಎರಡು ಸಾವಿರ ಎಕರೆ ಅರಣ್ಯ ಇಲಾಖೆ ಜಮೀನು ಡೀ ನೋಟಿಫಿಕೇಷನ್ ಮಾಡಿ ಕೊಡುವುದಾಗಿ ತಿಳಿಸಿದ್ದಾರೆ. ನಗರದಲ್ಲಿರುವ ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ 38 ಎಕರೆ ಜಮೀನು ನೀಡಲು ಸರ್ಕಾರ ಒಪ್ಪಿದೆ. ಚಿಕ್ಕಪಡಸಲಗಿಯ ಬ್ಯಾರೇಜ್ ಪುನರ್ ನಿರ್ಮಾಣಕ್ಕೆ ಸರ್ಕಾರದ ಗಮನ ಸೆಳೆಯಲಾಗಿದೆ. ನಗರದಲ್ಲಿರುವ 1,320 ಹೆಕ್ಟೇರ್ ಸವಳು ಜವಳು ಜಮೀನು ಸುಧಾರಣೆಗೆ ವಾಗ್ದಾನ ಮಾಡಿದೆ. ಕಂಕಣವಾಡಿ ಗ್ರಾಮಕ್ಕೆ ದೊಡ್ಡ ಹಡಗು ಮಂಜೂರು ಮಾಡುವುದಾಗಿ ಸರ್ಕಾರ ತಿಳಿಸಿದೆ. ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಲು ರಾಜ್ಯ ಸರ್ಕಾರ ಐವತ್ತು ಕೋಟಿ ರೂಪಾಯಿ ಮಂಜೂರು ಮಾಡುವುದಾಗಿ ಭರವಸೆ ನೀಡಿದೆ. ಮರೆಗುದ್ದಿ ಏತ ನೀರಾವರಿ ಯೋಜನೆ ಅನುಷ್ಠಾನಕ್ಕೆ ಒತ್ತಡ ಹೇರಲಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರ ಮಂಡಳ ಅಧ್ಯಕ್ಷ ಅಜಯ ಕಡಪಟ್ಟಿ, ಶ್ರೀಧರ ಕಂಬಿ, ರಾಜೇಂದ್ರಕುಮಾರ ಗುಡಗುಂಟಿ, ನಾಗಪ್ಪ ಸನದಿ, ದೇವಲ ಸರ್ಕಾರ ದೇಸಾಯಿ, ಮಲ್ಲಪ್ಪ ಕೋಟಿ, ಮಹಾಂತೇಶ ಹಿಟ್ಟಿನಮಠ, ವಿರುಪಾಕ್ಷಯ್ಯ ಗುಡಗುಂಟಿ, ಪ್ರಭು ಅಕ್ಕಿವಾಟ ಸಹಿತ ಇನ್ನೂ ಅನೇಕರು ಹಾಜರಿದ್ದರು.

ಗ್ಯಾನಪ್ಪಜ್ಜನಮಠ ಸರ್ವೋತ್ತಮವಾಗಿ ಬೆಳೆಯಲಿ ಕ್ಷೇತ್ರ ಅಭಿವೃದ್ಧಿಗೆ ಸಹಕಾರ: ಜನಾರ್ಧನ ರೆಡ್ಡಿ

ಬಾಗಲಕೋಟೆ : ಬೇವೂರಿನ ಗ್ಯಾನಪ್ಪಜ್ಜನ ಮಠವೂ ಸರ್ವೋತ್ತಮವಾಗಿ ಬೆಳೆಯಲಿ ಅದಕೆ ಬೇಕಾದ ಸಹಾಯ ಸಹಕಾರ ನೀಡುವೆ ಎಂದು ಮಾಜಿ ಸಚಿವರು ಗಂಗಾವತಿ ಶಾಸಕರಾದ ಗಾಲಿ ಜನಾರ್ಧನ ರೆಡ್ಡಿ ಹೇಳಿದರು.

ಅವರು ಬೇವೂರ ಗ್ರಾಮದಲ್ಲಿ ಶ್ರೀ ಗ್ಯಾನಪ್ಪಜ್ಜನವರ ಕಾರ್ತಿಕೋತ್ಸವ ಅಂಗವಾಗಿ ಲಿಂ.ಪ.ಪೂಜ್ಯ ಶ್ರೀ ಮುದಿಯಪ್ಪಜ್ಜನವರ ಬೆಳ್ಳಿ ಮೂರ್ತಿಯ ಪ್ರತಿಷ್ಠಾನ ಹಾಗೂ ಪ.ಪೂಜ್ಯ ಶ್ರೀ ಗ್ಯಾನಪ್ಪಜ್ಜನವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಈ ಭಾಗದಲ್ಲಿ ಈ ಮಠದಿಂದ ದಾರ್ಮಿಕ ಕ್ಷೇತ್ರ ಬೆಳವಣಿಗಯೊಂದಿಗೆ ಜನರ ಬೇಕು ಬೇಡಗಳಿಗೆ ಮಾರ್ಗದರ್ಶನ ಮಾಡುವ ಮೂಲಕ ಆಸರೆಯಾಗಿರುವ ಈ ಮಠದ ಪೂಜ್ಯರ ಕಾರ್ಯ ಶ್ಲಾಘನೀಯವಾಗಿದ್ದು, ಈ ಮಠದ ಬೇಳವಣಿಗೆಗೆ ಬೇಕಾಗುವ ಸಹಾಯ ಸಹಕಾರ ನೀಡುವೆ ಎಂದ ಅವರು, 2028 ನಿಮ್ಮೆಲ್ಲ ಆಶಿರ್ವಾದದಿಂದ ವೀರಣ್ಣ ಚರಂತಿಮಠವರು ಮತ್ತೆ ಶಾಸಕರಾಗುವುದು ಗ್ಯಾರಂಟಿ, ಅವರು ಹಿಂದೆ ಬೇವೂರಿನಲ್ಲಿ 2ಕೋಟಿ ರೂ ವೆಚ್ಚದಲ್ಲಿ ಯಡಿಯೂರಪ್ಪನವರು ಸಿ.ಎಂ ಇದ್ದಾಗ ಜಿ.ಜಿ.ಬೇವೂರ ಅವರ ಸ್ಮಾರಕ ಮಾಡಬೇಕೆಂದು ಎಲ್ಲವನ್ನು ರೆಡಿಮಾಡಿಕೋಂಡಿದ್ದರು, ಕೋನೆ ಹಂತದಲ್ಲಿ ನಮ್ಮ ಸರಕಾರ ಕೈತಪ್ಪಿತು, ಅಲ್ಲಿಂದ ಯಾರು ಮಾಡಲಾಗಿಲ್ಲಾ ಅದನ್ನು ಮುಂದಿನ ದಿನಗಳಲ್ಲಿ ವೀರಣ್ಣ ಚರಂತಿಮಠವರು ಮತ್ತು ನಾವು ಕುಡಿಕೊಂಡು 2ಕೋಟಿ ವೆಚ್ಚದಲ್ಲಿ ಜನರಲ್ ಜಿ.ಜಿ.ಬೇವೂರ ಅವರ ಸ್ಮಾರಕ ಹಾಗೂ ಕೋಟ್ಯಾಂತರ ರೂ ವೆಚ್ಚದಲ್ಲಿ ಕಲ್ಯಾಣ ಮಂಟಪ ಮತ್ತು ಭಕ್ತಾಧಿಗಳಿಗಳಿಗೆ ಎಲ್ಲ ರೀತಿಯ ಸೌಲಭ್ಯ ನಿರ್ಮಾಣ ಮಾಡುವ ಬರವಸೆಯನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನುವಹಸಿದ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಅವರು ಮಾತನಾಡಿ

ಕಳೆದ 50 ವರ್ಷಗಳಿಂದ ಬೇವೂರಿನ ಗ್ಯಾನಪ್ಪಜ್ಜನವರ ತಮ್ಮ ಹೇಳಿಕೆ ಮೂಲಕ ಭಕ್ತರಿಗೆ ಮಾರ್ಗದರ್ಶನ ಮಾಡುತ್ತಾ ಅವರ ಬದುಕಿಗೆ ದಾರಿದೀಪವಾಗಿದ್ದಾರೆ, ಪ್ರತಿವರ್ಷ ಇಲ್ಲಿ ಕಾರ್ತಿಕೋತ್ಸವ ಹಾಗೂ ಸಾಮೂಹಿಕ ವಿವಾಹಗಳು ಮತ್ತು ಧಾರ್ಮಿಕ ಚಟುಚಟಿ–ಕೆಗಳನ್ನು ಮಾಡುತ್ತಾ ಬಂದಿದ್ದಾರೆ, 50ವರ್ಷದ ಸುವರ್ಣ ಮಹೋತ್ಸವ ಆಚ–ರಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ, ಕ್ಷೇತ್ರದ ಅಭಿವೃದ್ಧಿಗಾಗಿ ಎಲ್ಲರೂ ಸಹಕ–ರಿಸೋಣ ಎಂದರು.

ಸಮಾರಂಭದ ನೇತೃತ್ವವನ್ನು ಪ.ಪೂಜ್ಯ ಗ್ಯಾನಪ್ಪಜ್ಜನವರ ವಹಿಸಿದ್ದರು, ಸಾನಿಧ್ಯವನ್ನು ಬಿಲ್ಕೆರೂರಿನ ಬಿಲ್ವಾಶ್ರಮದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಶ್ರೀಗಳು ವಹಿಸಿದ್ದರು,

ಮುಖ್ಯ ಅತಿಥಿಗಳಾಗಿ ನಗರಸಭೆ ಅಧ್ಯಕ್ಷರಾದ ಸವಿತಾ ಲಂಕೆನ್ನವರ, ಅಶೋಕ ಸಜ್ಜನ, ಮಹೇಶ ಪಾಟೀಲ, ರಾಜು ನಾಯ್ಕರ, ರಾಜು ಮುದೆನೂರ,

ಸುರೇಶ ಕೊಣ್ಣುರ, ನಿಂಗಪ್ಪ ಮಾಗನೂರ, ಶಿವು ವಾಡಕರ, ಸೇರಿದಂತೆ ಅನೇಕರು ಇದ್ದರು.

ಪೇಡೆರೇಷನ್ ಕಪ್ ಕರಾಟೆ ಚಾಂಪಿಯನ್ ಶೀಪ್‌ಗೆ ಆಯ್ಕೆ

ವಾರಣಾಸಿಯ ಬನಾರಸ್ ಹಿಂದೂ ಯುನಿವರ್ಸಿಟಿಯಲ್ಲಿ ನಡೆಯಲಿದೆ 22ನೇ ಆಲ್ ಇಂಡಿಯಾ ಇಂಟರ್ ಸ್ಕೂಲ್ ಕರಾಟೆ ಚಾಂಪಿಯನ್ ಶೀಪ್

ಬಾಗಲಕೋಟ : ಇದೇ ತಿಂಗಳು 28 ಮತ್ತು 29 ರಂದು ಉತ್ತರ ಪ್ರದೇಶದ ವಾರಣಾಸಿಯ ಬನಾರಸ್ ಹಿಂದೂ ಯುನಿವರ್ಸಿಟಿಯಲ್ಲಿ ನಡೆಯಲಿರುವ 22ನೇ ಆಲ್ ಇಂಡಿಯಾ ಇಂಟರ್ ಸ್ಕೂಲ್ & ಸಿನಿಯರ್ ಕರಾಟೆ ಚಾಂಪಿಯನ್‌ಶೀಪ್‌ಗೆ ರಾಜ್ಯದ ಪ್ರಸಿದ್ಧ ಕರಾಟೆ ಸಂಸ್ಥೆ ರಾಠೋಡ ಮಾರ್ಷಲ್ ಆರ್ಟ್ಸ್ & ಸ್ಕಿಲ್ ಯೂನಿಯನ್‌ನ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಸುಮಾರು 26 ವಿವಿಧ ರಾಜ್ಯಗಳಿಂದ ಸ್ಪರ್ಧೆಗಿಳಿಯುವ 3000ಕ್ಕೂ ಅಧಿಕ ಕರಾಟೆ ಪಟುಗಳ ಜೊತೆ ನಮ್ಮ ರಾಜ್ಯದ ಕರಾಟೆ ಪಟುಗಳು ಕಟಾ ಮತ್ತು ಕುಮಿಟೆ ವಿಭಾಗಗಳಲ್ಲಿ ಸೆಣಸಾಡಲಿದ್ದಾರೆ ಎಂದು ರಾಜ್ಯದ ಚೀಫ್ ಕೋಚ್ ಎಸ್.ಆರ್.ರಾಠೋಡ ತಿಳಿಸಿದ್ದಾರೆ. ಚಾಂಪಿಯನ್‌ಶೀಪ್‌ಗೆ ಆಯ್ಕೆಯಾದ ವಿದ್ಯಾರ್ಥಿಗಳು ಪ್ರತಿನಿತ್ಯ ಬೆಳಗಿನ ಜಾವ ಮತ್ತು ಸಾಯಂಕಾಲ ಕಠಿಣ ತರಬೇತಿಯಲ್ಲಿ ತೊಡಗಿಸಿಕೊಂಡು ಪೈಟಿಂಗ್ ಮತ್ತು ಕಟಾನಲ್ಲಿ ಅತ್ಯಂತ ಕಠಿಣ ಸ್ಪರ್ಧೆ ನೀಡಲು ಸಿದ್ಧರಾಗಿದ್ದು, ಸದರಿ ಕರಾಟೆ ಪಟುಗಳಿಗೆ ಶಾಸಕ ಎಚ್.ವೈ ಮೇಟಿ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿಪಂ ಸಿಇಓ ಶಶಿಧರ ಕುರೇರ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಜಿ.ಜಿ ಡೂಗನವರ, ಮೇಲ್ವಿಚಾರಕ ರಂಗಪ್ಪ ಕ್ಯಾಲಕೊಂಡ, ಕ್ರೀಡಾ ಇಲಾಖೆಯ ಸಿಬ್ಬಂದಿ ವರ್ಗ ಹಾಗೂ ಪಾಲಕರು ಸೇರಿದಂತೆ ಇತರೆ ಕ್ರೀಡಾಪಟುಗಳು ವಾರಣಾಸಿಯಲ್ಲಿ ರಾಜ್ಯದ ಕೀರ್ತಿಪತಾಕೆಯನ್ನ ಹಾರಿಸಿ ಗೆದ್ದು ಬರುವಂತೆ ಶುಭಹಾರೈಸಿದರು.

ಆಯ್ಕೆಯಾದ ಕ್ರೀಡಾಪಟುಗಳು : ಸಾಗರಕುಮಾರ ಮರಕುಂಬಿ, ಆನಂದ ನಾಯ್ಕ, ರಾಮಕೃಷ್ಣ ದಾಸರ, ಸಾಗರ ಚವ್ಹಾಣ, ಪ್ರಜ್ವಲ್ ರಾಠೋಡ, ಪ್ರಭುಸ್ವಾಮಿ ಆರಾಧ್ಯಮಠ, ಶರಣಗೌಡ ಪಾಟೀಲ, ಅರುಣ ಧನ್ನೂರ, ಕರಣ ರಾಠೋಡ, ತನ್ಮಯ ರಾವ್, ಮಹಮ್ಮದ್ ಮಾಜ್ ಗಲಗಲಿ, ಯಶವಂತ ನಾಯಕ, ಸಾತ್ವಿಕ ಶೇಬನ್ನವರ, ಶ್ರೇಯಸ್ ನಾಗರವಳ್ಳಿ, ಅಕ್ಷಿತ್ ರಾಟೋಡ, ಸಾಯಿಪ್ರಸಾದ ಪೂಜಾರಿ, ಜಯಂತ ಗೋರಗುಂಡಗಿ, ಈಶ್ವರಯ್ಯ ಶಾಂತನವರ ಆಯ್ಕೆಯಾಗಿದ್ದು, ಕರ್ನಾಟಕದಿಂದ ರೇಫ್ರಿಯಾಗಿ ಎಸ್.ಆರ್.ರಾಠೋಡ ಹಾಗೂ ಶಾಂತು

ಸಿ.ಟಿ. ರವಿ ಬಿಡುಗಡೆ: ಪಟಾಕಿ ಸಿಡಿಸಿ, ಸಿಹಿ ಹಂಚಿ ಬಿಜೆಪಿ ಕಾರ್ಯಕರ್ತರ ಸಂಭ್ರಮ

ಕೊಲ್ಹಾರ : ಬಿಜೆಪಿ ಎಂಎಲ್‌ಸಿ ಸಿ.ಟಿ. ರವಿಬಿಡುಗಡೆಗೆಹೈಕೋರ್ಟ್‌ಆದೇಶ ಹೊರಡಿಸಿದ ಬೆನ್ನಲ್ಲೇ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಮಾಜಿ ಸಚಿವ ಎಸ್ ಕೆ ಬೆಳ್ಳುಬ್ಬಿ ನೇತೃತ್ವದಲ್ಲಿ ಪರಸ್ಪರ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಪಟ್ಟಣದಲ್ಲಿ ಅಗಸಿ ಎದುರು ಬಿಜೆಪಿ ಕಾರ್ಯಕರ್ತರು ಘೋಷಣೆಗಳನ್ನು ಹಾಕುತ್ತಾ ಖುಷಿ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ ಮಾತನಾಡಿ ಇದು ಸಂವಿಧಾನಕ್ಕೆ ಮತ್ತು ಸತ್ಯಕ್ಕೆ ಸಿಕ್ಕ ಜಯ ಕಾಂಗ್ರೆಸ್ ಸರ್ಕಾರ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದು ಇಂದು ಗೌರವಾನ್ವಿತ ನ್ಯಾಯಾಲಯ ನೀಡಿದ ತೀರ್ಪನ್ನು ನಾವು ಸ್ವಾಗತಿಸುತ್ತೇವೆ ಎಂದರು. ಸಂವಿಧಾನದ ಅಂಬೇಡ್ಕರ್ ಅವರ ಬಗ್ಗೆ ಮಾತನಾಡುವ ಕಾಂಗ್ರೆಸ್ ಇಂದು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಸಂವಿಧಾನ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಸಿದ್ದರಾಮಯ್ಯ ಸರಕಾರದಲ್ಲಿ ಒಬ್ಬ ವಿಧಾನ ಪರಿಷತ್ ಸದಸ್ಯರನ್ನು ಈ ರೀತಿಯಾಗಿ ನಡೆಸಿಕೊಂಡಿದೆ. ಇನ್ನು ಸಾಮಾನ್ಯ ಜನರ ಪಾಡೇನು ಎಂದು ಖಂಡಿಸಿದರು. ಒಂದುವರೆ ವರ್ಷದ ಅಧಿಕಾರದಲ್ಲಿ ಕಾಂಗ್ರೆಸ್ ಇಂತಹ ಅನೇಕ ಅಧಿಕಾರ ದುರುಪಯೋಗ ಕಾರ್ಯಗಳನ್ನು ಮಾಡಿದೆ. ಮುಂದಿನ ದಿನಗಳಲ್ಲಿ ಜನತೆ ಈ ಸರಕಾರಕ್ಕೆ ತಕ್ಕ ಪಾಠವನ್ನು ಕಲಿಸುತ್ತಾರೆ. ಹೈಕೋರ್ಟಿನ ಆದೇಶದಿಂದ ಕಾಂಗ್ರೆಸ್ ಸರಕಾರಕ್ಕೆ ತೀವ್ರ ಮುಖಬಂಗವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಸಿ.ಎಂ.ಗಣಕುಮಾರ, ರಾಜಶೇಖರ್ ಶೀಲವಂತ್, ಸಂಗಪ್ಪ ಹುಚ್ಚಪ್ಪಗೋಳ, ಶಶಿಧರ್ ದೇಸಾಯಿ, ಈರಪ್ಪ ಬಿರಾದಾರ, ಬಸಪ್ಪ ಬಾಟಿ, ವಿಜಯಕುಮಾರ್ ಕೊಟ್ಟಿಗಿ, ಸುಭಾಷ್ ಭಜಂತ್ರಿ, ಬಾಬು ಭಜಂತ್ರಿ, ಗುರುಪಾದ ಗಣಿ, ಡೋಂಗ್ರಿ ಕಟಬರ ಸೇರಿದಂತೆ ಇತರರು ಇದ್ದರು.

ರಾಜ್ಯದಲ್ಲಿ ಕಾಂಗ್ರೇಸ್ ಸರ್ಕಾರದಿಂದ ಗುಂಡಾವರ್ತನೆ: ನಡಹಳ್ಳಿ

ತಾಳಿಕೋಟೆ : ಉತ್ತರ ಕರ್ನಾಟಕದ ರಾಜಧಾನಿ ಎಂದೇ ಹೆಸರು ಪಡೆದ ಬೆಳಗಾವಿಯಲ್ಲಿ ನಡೆದ ಚಳಿಗಾಲ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಜಲ್ವಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಬೇಕಿತ್ತು ಆದರೆ ಯಾವುದೇ ಚರ್ಚೆಗಳಿಗೆ ಅವಕಾಶ ಕೊಡದೇ ಹಕ್ಕುಗಳನ್ನು ಕೇಳಲು ಬಂದಿದ್ದ ಜನರ ಮೇಲೆ ಪೊಲೀಸ್‌ರಿಂದ ಲಾಠಿ ಚಾರ್ಜ ಮಾಡಿಸಿ ಗುಂಡಾ ವರ್ತನೆಯನ್ನು ಕಾಂಗ್ರೇಸ್ ಸರ್ಕಾರ ಮೆರೆದಿದೆ ಎಂದು ಭಾರತೀಯ ಜನತಾ ಪಕ್ಷದ ರೈತ ಮೂರ್ಚಾದ ರಾಜ್ಯಾಧ್ಯಕ್ಷ ಮಾಜಿ ಶಾಸಕ ಎ.ಎಸ್.ಪಾಟೀಲ(ನಡಹಳ್ಳಿ) ಅವರು ಹೇಳಿದರು.

ಶುಕ್ರವಾರರಂದು ದೂರವಾಣಿಯ ಮೂಲಕ ಪತ್ರಿಕೆಯೊಂದಿಗೆ ಮಾತನಾಡಿದ ಅವರು ರಾಜ್ಯದ ಜನರ ನಿರಿಕ್ಷೆಯನ್ನು ಹುಸಿ ಮಾಡುವಂತಹ ಕೆಲಸ ಕಾಂಗ್ರೇಸ್ ಸರ್ಕಾರ ಮಾಡಿದೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ನಡೆದ ಅಧಿವೇಶನದಲ್ಲಿ ಕಾವೇರಿದ ಚರ್ಚೆಗಳು ನಡೆಯುವದು ಸಹಜವಾಗಿದೆ ಒಬ್ಬರ ಮೇಲೆ ಆರೋಪಗಳು, ವಾದ ವಿವಾದಗಳು ನಡೆಯುವದು ಪ್ರಜಾಪ್ರಭುತ್ವದಲ್ಲಿ ಸರ್ವೆ ಸಾಮಾನ್ಯವಾಗಿದೆ ವಿಧಾನ ಸಭೆಯ ಒಳಗಡೆನೇ ಮುಖ್ಯಮಂತ್ರಿಗಳ ಮೇಲೆ ಚಪ್ಪಲಿತೊಗೊಂಡು ಹೊಡೆಯಲು ಹೊದಂತಹ ಘಟನೆಗಳು ಈ ಹಿಂದೆ ನಡೆದಿವೆ, ಯಾವ ಸಂದರ್ಬದಲ್ಲಿಯೂ ವಿಧಾನ ಸಭೆ ಒಳಗಡೆ ಪೊಲೀಸ್‌ರು ಸಭಾಂಗಣದ ಒಳಗಡೆ ಬಂದು ಜನಪ್ರತಿನಿಧಿಗಳ ಮೇಲೆ ಮಾನಸಿಕವಾಗಿ, ದೈಹಿಕವಾಗಿ ಹಲ್ಲೆ ಮಾಡಿ ಅರೆಸ್ಟ ಮಾಡಿ ಅಮಾನ್ಯವಿಯವಾಗಿ ನಡೆದುಕೊಂಡಂತಹ ಘಟನೆ ನಮ್ಮ ರಾಜ್ಯದ ರಾಜಕೀಯ ಇತಿಹಾಸದಲ್ಲಿ ನಡೆದಿದ್ದಿಲ್ಲಾ ಆದರೆ ಇವತ್ತು ಕಾಂಗ್ರೇಸ್ ಸರ್ಕಾರ ಪೊಲೀಸ್‌ರನ್ನು ಬಳಸಿಕೊಂಡು ವಿದಾನ ಸಭೆಯ ವಿಧಾನ ಪರಿಷತ್ತಿನಲ್ಲಿ ನಡೆದ ವಾದ ಪ್ರತಿವಾದಗಳ ಸಂದರ್ಬದಲ್ಲಿ ಬೇರೆ ರೀತಿಯ ಬಣ್ಣವನ್ನು ಬಳೆದು ಒಬ್ಬ ಹೆಣ್ಣು ಮಗಳಿಗೆ ನೋವಾಗಿದೆ ಅನ್ಯಾಯವಾಗಿದೆ ಎಂದು ಸಾಕ್ಷೀಗಳು ಇಲ್ಲದೇನೆ ಹೊರಗಡೆ ಆ ಮಂತ್ರಿಗಳಿಂದ ಎಫ್‌ಆಯ್‌ಆರ್ ಮಾಡಿಸಿ ಒಬ್ಬ ಜನಪ್ರತಿನಿದಿಯನ್ನು ತೇಜೋವಧೆ ಮಾಡುವಂತಹ ಕೆಲಸ ಕಾಂಗ್ರೇಸ್ ಸರ್ಕಾರ ಮಾಡಿದೆ ಇದನ್ನು ನಾನು ಉಗ್ರವಾಗಿ ಖಂಡಿಸುತ್ತೇನೆಂದರು.

ಪ್ರತಿಯೊಬ್ಬ ಜನಪ್ರತಿನಿದಿಗೆ ವಿಧಾನ ಸಭೆಯ ಅದಿವೇಶನದ ನಡೆದ ಸಂದರ್ಬದಲ್ಲಿ ಆ ಆವರಣದ ಏನೇ ಘಟನೆ ನಡೆದರು ಅದಕ್ಕೆ ಮಾಲಿಕರು ಸಭಾಧ್ಯಕ್ಷರು, ಸಭಾಪತಿಗಳು ಇರುತ್ತಾರೆ ಆ ಸಮಯದಲ್ಲಿ ಹೆಣ್ಣು ಮಗಳಿಗೆ ಅವಮಾನ ವಾಗುವ ರೀತಿಯಲ್ಲಿ ಮಾತುಗಳೇನಾದರೂ ಕಾಣಿಸಿದರೆ ಅದರ ಕುರಿತು ತಿರ್ಮಾನ ತೆಗೆದುಕೊಳ್ಳುವಂತಹ ಹಕ್ಕು ಸಭಾಪತಿಗಳಿಗೆ ವಿನಃ ಪೊಲೀಸ್‌ರಿಗಿಲ್ಲಾ ಇವತ್ತಿನ ವರೆಗೆ ಅನೇಕ ಘಟನೆಗಳು ನಡೆದಿವೆ ಈ ಹಿಂದೆ ಸಿದ್ದರಾಮಯ್ಯನವರು ವಿರೋದ ಪಕ್ಷದ ನಾಯಕರಾಗಿದ್ದಾಗ ಬಾಗಲಿಗೆ ಒದ್ದು ಬಾಗಿಲು ಮುರಿಯುವಂತಹ ಘಟನೆಗಳು ನಡೆದಿವೆ ಅಲ್ಲದೇ ವಿರಪ್ಪ ಮೋಯ್ಲಿ ಅವರು ಮುಖ್ಯಮಂತ್ರಿ ಇದ್ದಾಗ ರಮೇಶ ಕುಮಾರ ಅನ್ನುವಂತವರು ಚಪ್ಪಲಿಲೇ ಹೊಡೆಯಲು

ಹೋದಂತಹ ಘಟನೆ ನಡೆದಿದೆ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿ ಇದ್ದಾಗ ಹಲ್ಲೆ ಮಾಡಲು ಹೋದಂತಹ ಘಟನೆಯೂ ಕೂಡಾ ನಡೆದಿದೆ ಇವು ಯಾವ ಘಟನೆಯೂ ಪೊಲೀಸ್ ಸ್ಟೇಷನ್‌ಗೆ ಬಂದಿದಿಲ್ಲಾ ಅದೇನಿದ್ದರೂ ಸಭಾಧ್ಯಕ್ಷ ಸಮ್ಮುಖದಲ್ಲಿ ಚರ್ಚೆ ನಡೆಯಬೇಕು ಅದೇನಾದರೂ ಘಟನೆ ಸರಿ ಇದ್ದರೆ ಸಭಾಧ್ಯಕ್ಷರೇ ತಿರ್ಮಾನ ಮಾಡಬೇಕೆ ವಿನಃ ಪೊಲೀಸ್‌ರಿಗೆ ಒಳಗೆ ಬರಲು ಅವಕಾಶ ಇಲ್ಲಾ ಆದರೆ ಇಲ್ಲಿ ಪೊಲೀಸ್‌ರಿಗೆ ಒಳಗೆ ಬರಲು ಅವಕಾಶ ಕೊಟ್ಟು ಪೊಲೀಸ್‌ರಿಂದಲೇ ಒಬ್ಬ ಜನಪ್ರತಿನಿಧಿಯನ್ನು ಹೆದರಿಸುವಂತಹ ಕೆಲಸ ಮಾಡಿರುವದು ಪ್ರಜಾಪ್ರತಿನಿದಿಗಳಿಗೆ ಪ್ರಜಾ ಸರ್ಕಾರಕ್ಕೆ ಮಾಡಿರುವ ಅವಮಾನವಾಗಿದೆ ಇದನ್ನು ನಾನು ಭಲವಾಗಿ ಖಂಡಿಸುತ್ತೇನೆಂದರು.

ನ್ಯಾಯಾಲಯದಲ್ಲಿ ಏನು ತಿರ್ಮಾನವಾಗಬೇಕು ಆಗುತ್ತದೆ ಈ ಘಟನೆಯನ್ನು ಇಷ್ಟರಮಟ್ಟಿಗೆ ತೆಗೆದುಕೊಂಡು ಹೋಗಿರುವ ಕಾಂಗ್ರೇಸ್ ಸರ್ಕಾರ ಮಾಡಿರುವದು ಅಕ್ಷಮ್ಯ ಅಪರಾದವಾಗಿದೆ ಕಾಂಗ್ರೇಸ್ ಸರ್ಕಾರ ಪ್ರತಿಯೊಬ್ಬರನ್ನು ಜನ ಸಾಮಾನ್ಯರನ್ನು ಜನಪ್ರತಿನಿಧಿಗಳನ್ನು ಹೆದರಿಸುವದಕ್ಕೆ ಪೊಲೀಸ್‌ರನ್ನು ಬಿಟ್ಟು ಗುಂಡಾಗೀರಿ ಮಾಡುತ್ತಿದೆ ಇದರಿಂದ ರಾಜ್ಯದಲ್ಲಿ ಪೊಲೀಸ್‌ರ ಗುಂಡಾಗೀರಿ ಸರ್ಕಾರ ಕರ್ನಾಟಕದಲ್ಲಿ ರಚನೆಗೆ ಬಂದಿದೆ ಎನ್ನಿಸುತ್ತಿದೆ ಇದಕ್ಕೆ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಮತ್ತು ರಾಜ್ಯದ ಜನರು ತಕ್ಕ ಉತ್ತರ ನೀಡಲಿದ್ದಾರೆಂದು ಮಾಜಿ ಶಾಸಕ ಎ.ಎಸ್.ಪಾಟೀಲ(ನಡಹಳ್ಳಿ) ಅವರು ಹೇಳಿದರು.

ಶಾ ಹೇಳಿಕೆ ಖಂಡಿಸಿ ಪ್ರತಿಭಟನೆ

ಇಂಡಿ : ಪ್ರಗತಿಪರ ಚಿಂತಕರ ಹಾಗೂ ಡಾ.ಬಿ.ಆರ್.ಅಂಬೇಡ್ಕರವರ ಅನೂಯಾಯಿ ಬಳಗದ ವತಿಯಿಂದ ಸವಿಂಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ ಅವರ ಬಗ್ಗೆ ಹಗುರವಾಗಿ ಮಾತನಾಡಿದ ಕೇಂದ್ರ ಗ್ರಹ ಸಚಿವ ಅಮಿತ್ ಶಾ ಅವರ ಹೇಳಿಕೆ ಖಂಡಿಸಿ ವಿವಿಧ ಸಂಘಟನೆ ಪದಾಧಿಕಾರಿಗಳು ಶುಕ್ರವಾರರಂದು ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕೆಲ ಕಾಲ ರಸ್ತೆ ತಡೆದು ಪ್ರತಿಭಟನೆ ಮಾಡಿ ಶಾ ಅವರ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಘೋಷಣೆಗಳನ್ನು ಕೂಗಿ ಸಚಿವ ಸಂಪೂಟದದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು. ನಂತರ ಉಪವಿಭಾಗಾಧಿಕಾರಿ ಅಬೀದ ಗದ್ಯಾಳ ಅವರಿಗೆ ರಾಷ್ಟ್ರಪತಿಗಳಿಗೆ ಮನವಿ ಪತ್ರಸಲ್ಲಿಸಿದರು. ಈ ಸಂದರ್ಭದಲ್ಲಿ ಭಿಮಣ್ಣ ಕವಲಗಿ, ಜಾವಿದ ಮೋಮಿನ, ಇಲಿಯಾಸ ಬೋರಾಮಣಿ, ಪುರಸಭೆ ಅಧ್ಯಕ್ಷ ಲಿಂಬಾಜಿ ರಾಠೋಡ, ಉಪಾಧ್ಯಕ್ಷ ಜಾಹಂಗಿರ ಸೌಧಾಗರ, ಪ್ರಶಾಂತ ಕಾಳೆ,

ಹರಿಚಂದ್ರ ಪವಾರ, ಜಟ್ಟಿಪ್ಪ ರವಳಿ, ವಿನಾಯಕ ಗುಣಸಾಗರ, ಸಂಜೀವ ರಾಠೋಡ, ನಿರ್ಮಲಾ ತಳಕೇರಿ, ಶೈಲಾಜ ಜಾಧವ, ಅಯೂಬ ಬಾಗವಾನ, ಉಮೇಶ ದೇಗಿನಾಳ, ಸದಾಶೀವ ಪ್ಯಾಟಿ, ಭೀಮಾಶಂಕರ ಮೋರಮನ, ಅವಿನಾಶ ಬಗಲಿ, ರಮಜಾನ ವಾಲಿಕಾರ, ಮಲ್ಲು ಮಡ್ಡಿಮನಿ, ಸತ್ತಾರ ಬಾಗವಾನ, ಪ್ರೋ ಮಾಡ್ಯಾಳ ರೈಜಿಸ್ ಅಷ್ಟೇಕರ ಪಾಲ್ಗೊಂಡಿದ್ದರು.

ಸಚಿವ ಸಂಪುಟದಿಂದ ಅಮಿತ್ ಶಾ ವಜಾಕ್ಕೆ ದಸಂಸ ನಾಗವಾರಬಣ ಸಂಘಟನೆಯಿಂದ ಆಗ್ರಹ



ದೇವರಹಿಪ್ಪರಗಿ : ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಾ,ಬಿ.ಆರ್ ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ್ದರಿಂದ ಅವರನ್ನು ಕೇಂದ್ರ ಸಚಿವ ಸಂಪುಟದಿಂದ ವಜಾಗೊಳಿಸಿ ದೇಶದ್ರೋಹದಡಿ ಪ್ರಕರಣ ದಾಖಲಿಸಿ ದೇಶದಿಂದ ಗಡಿಪಾರು ಮಾಡಬೇಕೆಂದು. ಅಮಿತ್ ಶಾ ವಿರುದ್ಧ ಘೋಷಣೆ ಹಾಕಿ ಆಕ್ರೋಶ ವ್ಯಕ್ತಪಡಿಸಿದ . ದಲಿತ ಸಂಘರ್ಷ ಸಮಿತಿ ನಾಗವಾರಬಣ ಸಂಘಟನೆಯಿಂದ ದೇವರಹಿಪ್ಪರಗಿ ತಶಿಲ್ದಾರ್ ಮುಖಾಂತರ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಯಿತು.

ಡಾ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಈ ದೇಶದ ಶೋಷಿತ ಸಮುದಾಯಗಳಿಗೆ ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯ,ಸಮಾನತೆ, ಆರ್ಥಿಕ ಹೀಗೆ ಹಲವಾರು ಕ್ಷೇತ್ರದಿಂದ ಶತಶತಮಾನಗಳಿಂದ ಯಾವುದೇ ಸ್ವಾತಂತ್ರ್ಯ ಧ್ವನಿಯಿಲ್ಲದೆ ನರಕದ ಕೂಪದಲ್ಲಿ ಕೋಳಿಯುತ್ತಿರುವಾಗ ಯುಗ ಯುಗಾಂತರಗಳಿಂದ ಯಾವುದೇ ದೇವರು ಧ್ವನಿಕೊಟ್ಟಿಲ್ಲ, ಈ ದೇಶದ ಪ್ರತಿಯೊಂದು ಪ್ರಜೆಗೂ ನ್ಯಾಯಯುತ ಬದುಕು ಕೊಟ್ಟವರು ಡಾ, ಬಾಬಾ ಸಾಹೇಬ ಅಂಬೇಡ್ಕರ್ ರವರು ಹಾಗಾಗಿ ನಮ್ಮೆಲ್ಲರ ಜೀವ, ಉಸಿರು, ಬದುಕು ಬಾಬಾ ಸಾಹೇಬರೆ, ಅಮಿತ್ ಶಾ ಗೃಹ ಮಂತ್ರಿ ಯಾಗಿದ್ದು ಕೂಡಾ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಆಶೀರ್ವಾದದಿಂದ. ಎಂಬುದನ್ನು ಮರೆತ ಅಮಿತ್ ಶಾ, ಅಂಬೇಡ್ಕರ್ ಎನ್ನುವುದು ಫ್ಯಾಷನ್ ಆಗಿ ಬಿಟ್ಟಿದೆ ಅಂಬೇಡ್ಕರ್ ಬದಲು ದೇವರು ಹೆಸರು ಹೇಳಿದರೆ ಏಳೇಳು ಜನ್ಮದಲ್ಲಿ ಆಗುವಷ್ಟು ಸ್ವರ್ಗವಾದರೂ ಸಿಗುತ್ತಿತ್ತು ಎಂದು ಹೇಳಿ ಡಾ,ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಹಾಗೂ ಒಂದನೂರಾ ಮೂವತ್ತು ಕೋಟಿ ಜನರ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ ಎಂದು ದೂರಿದ್ದಾರೆ.ಈ ಸಂದರ್ಭದಲ್ಲಿ ಉಮೇಶ್ ರೋಗಿ, ಬಸವರಾಜ್ ಎಂ ತಳಕೇರಿ, ಶಿವಾನಂದ ಇಂಗಳಗಿ, ಕಮಲಸಾಬ್ ಕಾಟಮನಳ್ಳಿ, ಸಿದ್ದಾರ್ಥ್ ಮೂಳಸಾವಳಗಿ,ಪ್ರಭು ಅಂಕಲಗಿ,ಜಾನು ಗುಡಿಮನಿ,ಶಿವಾನಂದ ವಾಲಿಕಾರ,ಸಾಯಬಣ್ಣ ದಳಪತಿ, ಪ್ರಶಾಂತ ದೊಡಮನಿ,ರಾಘು ತಳವಾರ,ನಿಂಗರಾಜ ಮಣ್ಣೂರ,ಪ್ರಕಾಶ ರೊಟ್ಟಿ,ಮುರಗೇಂದ್ರ ಯಾಳವಾರ, ರಾಘವೇಂದ್ರ ತಳವಾರ,ಮೌನೇಶ್ ನಾಟಿಕರ್, ಬಸ್ಯಯ್ ಹೀರೆಮಠ ಹಾಗೂ ಇತರರು ಇದ್ದರು.

ನಗರದ ಡಾ. ಪತ್ತಾರಗೆ ವಿಶ್ವಕರ್ಮ ವೈದ್ಯಭೂಷಣ ಪ್ರಶಸ್ತಿ

ಜಮಖಂಡಿ : ಬೆಳಗಾವಿ ಜಿಲ್ಲೆ ಸವದತ್ತಿಯ ಶಿರಸಂಗಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ ಶಿರಸಂಗಿ ಹಾಗೂ ವಿಶ್ವಕರ್ಮ ಪ್ರತಿಷ್ಠಾನ ಶಿರಸಂಗಿ ಹಮ್ಮಿಕೊಂಡಿದ್ದ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ನಗರದ ದಂತ ವೈದ್ಯ ಡಾ.ವಿದ್ಯಾದರ ಪತ್ತಾರ ಅವರಿಗೆ ವಿಶ್ವಕರ್ಮ ವೈದ್ಯಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ನಗರದ ಸ್ಮೈಲ್ ಕೇರ್ ದಂತಾಲಯದ ದಂತತಜ್ಞ ಡಾ.ವಿದ್ಯಾದಾರ ಪತ್ತಾರ ವೈದ್ಯಕೀಯ ಕ್ಷೇತ್ರದಲ್ಲಿ ವಿಶೇಷ ಸೇವೆಯನ್ನು ಸಲ್ಲಿಸಿದ್ದಕ್ಕಾಗಿ ಲಭಿಸಿದೆ. ವಿಶೇಷ ಸಾಧನೆಗೆ ಸ್ಥಳೀಯ ಲಯನ್ಸ ಸಂಸ್ಥೆಯ ಪದಾಧಿಕಾರಿಗಳು ಲಯನ್ಸ ನಿರ್ದೇಶಕರು ಮತ್ತು ವಿವಿಧ ಸಂಘಟನೆಗಳು ಅಭಿನಂದಿಸಿದ್ದಾರೆ.

ಸಾಮಗ್ರಿ ಖರೀದಿಯಲ್ಲಿ ಅವ್ಯವಹಾರ–ಪುರಸಭೆ ಲಿಂಗಸುಗೂರು ಸಾಮಾನ್ಯ ಸಭೆಯಲ್ಲಿ ಸದಸ್ಯರ ಆರೋಪ ಕ್ರಮ ಜರುಗಿಸಲು ಆಗ್ರಹ

ವರದಿ : ಚಂದ್ರೇಗೌಡ

ಲಿಂಗಸುಗೂರು : ಸ್ಥಳೀಯ ಪುರಸಭೆಯಲ್ಲಿ ವಿದ್ಯುತ್ ಬಲ್ಬು ಇತರೆ ಉಪಕರಣಗಳ ಖರೀದಿಯಲ್ಲಿ ವ್ಯವಹಾರ ನಡೆಸಲಾಗಿದೆ ಎಂದು ಪುರಸಭೆ ಸದಸ್ಯ ದೊಡ್ಡನಗೌಡ ಪಾಟೀಲ್ ಆರೋಪಿಸಿದರು ಪುರಸಭೆ ಸಭಾಂಗಣದಲ್ಲಿ ಗುರುವಾರ ನಡೆದ ಸಾಮಾನ್ಯ ಸಭೆಯಲ್ಲಿ ವಿದ್ಯುತ್ತು ಶಾಖೆ ನೀರು ಸರಬರಾಜು ಶಾಖೆಗೆ ಅವಶ್ಯವಿರುವ ಸಾಮಗ್ರಿಗಳ ಖರೀದಿ ಕುರಿತು ನೀಡಿದ ಚರ್ಚೆಯಲ್ಲಿ ವ್ಯತ್ಯಾಸವಿರುವುದ–ರಿಂದ ಪಟ್ಟಿಗಳನ್ನು ಪ್ರದರ್ಶಿ ಮಾತನಾಡಿದರು ವಿದ್ಯುತ್ ಸಾಮಗ್ರಿಗಳನ್ನು ಹೆಚ್ಚಿನ ದರದಲ್ಲಿ ಖರೀದಿಸಲಾಗಿದ್ದು ಗುತ್ತಿಗೆದಾರರು ಬಿಲ್ ಮಾತ್ರ ತಡೆಯಬೇಕೆಂದು ಒತ್ತಾಯಿಸಿದರು ಸದಸ್ಯರಾದ ಮೊಮ್ಮದ್ ರಫಿ ಸೋಮನಾಥ ರೆಡ್ಡಿ ದನಿಗೂಡಿಸಿದರು. ಅನೇಕ ವರ್ಷಗಳಿಂದ ಪುರಸಭೆ ಮಳಿಗೆಗಳ ಹರಾಜು ಪ್ರಕ್ರಿಯೆ ನಡೆಸಿಲ್ಲ ಪ್ರತಿ ತಿಂಗಳು 18ಸಾವಿರ ನಷ್ಟವಾಗುತ್ತಿದೆ. ಕೂಡಲೇ ಹೊಸ ಟೆಂಡರ್ ಕರಿಯಬೇಕು. ಬಾಡಿಗೆದಾರರನ್ನು ತೆರವುಗೊಳಿಸಿ ಮಳಿಗೆಗಳನ್ನು ರಿಪೇರಿ ಗೊಳಿಸಿ ಸುಣ್ಣ ಬಣ್ಣ ಬಳಿದು ಹೆಚ್ಚಿನ ರಖಂಗೆ ಟೆಂಡರ್ ಕರೆಯಬೇಕೆಂದು ಪುರಸಭೆ ಸದಸ್ಯ ರುದ್ರಪ್ಪ ಬ್ಯಾಗಿ ಅಗ್ರಹಿಸಿದರು.

ಟೆಂಡರ್ ಪಡೆಯಲು ಮಳಿಗೆ ಮಾಲೀಕರ ಜೊತೆ ಒಪ್ಪಂದ ಮಾಡಿಕೊಂಡ ದಾಖಲೆಗಳೇ ಇಲ್ಲ.

ಈ ಬಗ್ಗೆ ನಿರ್ಲಕ್ಷ ವಹಿಸಲಾಗಿದೆ.

ಎಂದು ಸದಸ್ಯ ಪ್ರಮೋದ್ ಕುಲಕರ್ಣಿ ಹೇಳಿದರು. ಮಳಿಗೆ ಬಾಡಿಗೆದಾರರಿಗೆ ನೋಟಿಸ್ ನೀಡಿ ತೆರವುಗೊಳಿಸಲಾಗುವುದು ಎಂದು ಪುರಸಭೆ ಮುಖ್ಯ ಅಧಿಕಾರಿ ರೆಡ್ಡಿ ರಾಯನಗೌಡ ಹೇಳಿದರು ಬಾಡಿಗೆ ಪಡೆದ ಮಳಿಗೆಗಳನ್ನು ತಮಗೆ ಬೇಕಾದಂತೆ ಗೋಡೆ ಒಡೆದು ಹಾಕಿದ್ದಾರೆ ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಸದಸ್ಯ ಯಮನಪ್ಪ ದೇಗಲಮಡಿ ಒತ್ತಾಯಿಸಿದರು. ಹೊಸ ಬಸ್ ನಿಲ್ದಾಣ ವೃತ್ತ ಬಸವಸಾಗರ ಕ್ರಾಸ್ ವೃತ್ತಗಳಲ್ಲಿ ಪುರಸಭೆ ನಿಧಿಯಿಂದ ರಸ್ತೆ ಸಿಗ್ನಲ್ ಸಿಸಿ ಕ್ಯಾಮೆರಾ ಅಳವಡಿಸುವ ಕುರಿತು ನಡೆದ ಚರ್ಚೆಯಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲು ನಮ್ಮ ಒಪ್ಪಿಗೆ ಇದೆ ಸಿಗ್ನಲ್ ಆಳವಡಿಸುವುದು ಹೆದ್ದಾರಿ ಕಚೇರಿಗೆ ವಹಿಸಬೇಕು ಎಂದು ಬಹುತೇಕ ಸದಸ್ಯರು ಹೇಳಿದರು ವಾರ್ಡ್ ವಾರ್ ನಾಮಫಲಕಗಳನ್ನು ಅಳವಡಿಸಲು ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು. ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ ದರ್ಜೆಗೆ ಏರ್ಪಡಿಸಲು ಪ್ರಸ್ತಾವನೆ ಸಿದ್ಧ ಪಡಿಸಲಾಗುತ್ತಿದೆ ಎಂದು ಪುರಸಭೆ ಮುಖ್ಯ ಅಧಿಕಾರಿ ರೆಡ್ಡಿ ರಾಯನಗೌಡ ಸಭೆಗೆ ತಿಳಿಸಿದಾಗ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು. ರಾಯಚೂರಿನಲ್ಲಿ ನಡೆಯುವ 11ನೆಯ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಪುರಸಭೆಯಿಂದ ಎರಡು ಲಕ್ಷ ರೂಪಾಯಿ ಆರ್ಥಿಕ ಸಹಾಯ ನ